ಬೆಲೆ ರೂ.2.50

Date of posting - 15th of every month at BPC Udupi.

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ

ನಿಮ್ಮ ಮೊಬೈಲ್‌ಗೆ

STHANIKA

PLAY STOREನಿಂದ STHANIKA ಆ್ಯಪನ್ನು ವರ್ಗಾಯಿಸಿಕೊಳ್ಳಿ

ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2024

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844

ಸಂಪುಟ-25 ಸಂಚಿಕೆ-1 ಪುಟಗಳು-10 Registered Under No.UDP/1260/2024-2026

## ಶ್ರೀ ಶಾರದಾ ಕ್ರಿಕೆಟ್ ಟ್ರೋಫಿ-2023 : ರಾವ್ ಬ್ರದರ್ಸ್ ಕಟಪಾಡಿ ತಂಡಕ್ಕೆ

ವರದಿ : ಕೃಷ್ಣಕುಮಾರ್ ರಾವ್ ಮಟ್ಟು





ರಾವ್ ಬ್ರದರ್ಸ್ ಕಟಪಾಡಿಯು ಶ್ರೀ ಶಾರದಾ ಟ್ರೋಫಿ 2023 ವಿಜೇತ ತಂಡವಾಗಿ ಮಿಂಚಿದೆ. ಡಿಸೆಂಬರ್ 24ರಂದು ಸ್ಥಳೀಯ ಎಂ.ಜಿ.ಎಂ. ಕಾಲೇಜಿನ ಕ್ರೀಡಾಂಗಣದಲ್ಲಿ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ನಡೆದ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದಲ್ಲಿ ರಾಜ್ಯಾದ್ಯಂತ ಆಗಮಿಸಿದ್ದ ಒಟ್ಟು 21 ತಂಡಗಳು ಭಾಗವಹಿಸಿದ್ದವು. ಸಂಜೆ ನಡೆದ ಫೈನಲ್ ಪಂದ್ಯಾಟದಲ್ಲಿ ಕುಂದಾಪುರ ಸ್ಟ್ರೈಕರ್ಸ್ ತಂಡವನ್ನು ಸೋಲಿಸಿ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಅಂದು ಬೆಳಿಗ್ಗೆ 8.00ಗಂಟೆಗೆ ಪ್ರಾರಂಭಗೊಂಡ ಈ ಪಂದ್ಯಾಟವು ಮೊದಲ ಎರಡು ಪಂದ್ಯಗಳ ಬಳಿಕ ಸಾಂಕೇತಿಕವಾಗಿ ಉದ್ಘಾಟನೆಯುನ್ನು ಮಾಡಲಾಯಿತು. ದೂರದ ಸುಳ್ಯ ತಂಡದ ಸದಸ್ಯ ಸುಬ್ರಹ್ಮಣ್ಯ ರಾವ್ ಬೌಲಿಂಗ್ ಮಾಡಿ, ಕಾರ್ಕಳ ಶ್ರೀ ಶಂಕರ ಪ್ರತಿಷ್ಠಾನದ ಅಧ್ಯಕ್ಷರೂ, ಉಡುಪಿ ಜಿಲ್ಲಾ ಬ್ರಾಹ್ಮಣ ಸಂಘದ ಕೋಶಾಧಿಕಾರಿಯೂ ಆಗಿರುವ ಕೇಶವ ರಾವ್ ಬ್ಯಾಟಿಂಗ್ ಮಾಡುವ ಮೂಲಕ ಪಂದ್ಯಾಟವನ್ನು ಪ್ರಾರಂಭಿಸಿ ಕೊಟ್ಟರು.

ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ್ ಭಂಡಿ, ಯುವ ವೇದಿಕೆಯ ಅಧ್ಯಕ್ಷ ಸಂತೋಷ್ ರಾವ್ ಚಿಟ್ಪಾಡಿ, ಪೂರ್ವಾಧ್ಯಕ್ಷರುಗಳಾದ ಸಿ.ಎಸ್ ರಾವ್, ವೈ. ಭುವನೇಂದ್ರ ರಾವ್, ಪದಾಧಿಕಾರಿಗಳು ಮತ್ತು ನಿರ್ದೇಶಕರು ಉಪಸ್ಥಿತರಿದ್ದರು. ಅದೇ ಸಂದರ್ಭದಲ್ಲಿ ಬೇರೆ ಬೇರೆ ಸಂಘಗಳಿಂದ ಆಗಮಿಸಿದ್ದ ಗಣ್ಯರನ್ನು ಗುರುತಿಸಿ ಗೌರವಿಸಲಾಯಿತು.

ಶ್ರೀ ಶಾರದಾ ಟ್ರೋಫಿ ಪಂದ್ಯಾಟಕ್ಕಾಗಿ ಸ್ಥಳೀಯ ಎಂ.ಜಿ.ಎಂ. ಮೈದಾನದಲ್ಲಿ 2 ಗ್ರೌಂಡ್ ಹಾಕಲಾಗಿತ್ತು. ಒಟ್ಟು 21 ತಂಡಗಳು ಭಾಗವಹಿಸಿದುದರಿಂದ ಪಂದ್ಯಗಳನ್ನು 6 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಮಧ್ಯಾಹ್ನದವರೆಗೆ ನಿರಂತರ ನಡೆದ ಆಟಗಳಲ್ಲಿ ತಂಡಗಳು ಪರಸ್ಪರ ಹೋರಾಟ ನೀಡಿ ಸೆಮಿಫೈನಲ್ ಹಂತಕ್ಕೆ ತಂದು ನಿಲ್ಲಿಸಿದವು. ಮಧ್ಯಾಹ್ನದ ನಂತರ ನಡೆದ ಮೊದಲ ಸೆಮಿಫೈನಲ್‌ನಲ್ಲಿ ಕುಂದಾಪುರ ಸ್ಟ್ರೈಕರ್ಸ್ ತಂಡವು ನಂದಳಿಕೆ ತಂಡವನ್ನೂ, ಎರಡನೇ ಸೆಮಿಫೈನಲ್‌ನಲ್ಲಿ ರಾವ್ ಬ್ರದರ್ಸ್ ಕಟಪಾಡಿ ತಂಡವು ಶ್ರೀ ದುರ್ಗಾ ಮಂದಾರ್ತಿ ತಂಡವನ್ನೂ ಸೋಲಿಸಿ ಫೈನಲ್ ಪಂದ್ಯಕ್ಕೆ ಮೈದಾನ ಸಿದ್ಧವಾಯಿತು. ಹಗಲು ಕಡಿಮೆಯಾಗಿರುವ, ಬೇಗನೆ ಕತ್ತಲಾಗುವುದೆನ್ನುವ ಎಚ್ಚರಿಕೆಯಿಂದ ಫೈನಲ್ ಪಂದ್ಯಗಳಿಗೆ ಕೇವಲ 4 ಓವರ್‌ಗಳನ್ನು ನಿಗದಿಗೊಳಿಸಲಾಯಿತು. ಹೀಗೆ ಸುಮಾರು 5.30ರ ವೇಳೆಗೆ ಫೈನಲ್ ಪಂದ್ಯಾಟದಲ್ಲಿ ರಾವ್ ಬ್ರದರ್ಸ್ ಕಟಪಾಡಿ (ಎ) ತಂಡವು ಚಾಂಪಿಯನ್ ಆಗಿ ಮೂಡಿಬಂತು.

ನಿರ್ಲಿಪ್ತ ತೀರ್ಪುಗಾರರಾಗಿ ವಿಜಯ್ ವಿದ್ಯಾವರ್ಧಕ ಪ್ರೌಢ ಶಾಲೆ ಶಿರ್ವ,

(5ನೇ ಪುಟಕ್ಕೆ....)

## ಮಹಿಳಾವೇದಿಕೆಯಿಂದ ಒಳಾಂಗಣ ಕ್ರೀಡೆಗಳು



ತಾ.24.12.2023 ರಂದು ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಸ್ಥಾನಿಕ ಸಮಾಜದ ಮಹಿಳೆಯರು ಮತ್ತು ಮಕ್ಕಳಿಗಾಗಿ ಒಳಾಂಗಣ ಕ್ರೀಡೆಗಳನ್ನು ಏರ್ಪಡಿಸಲಾಗಿತ್ತು. ಬೆಳಗ್ಗಿನ ಉಪಹಾರದ ನಂತರ ಸುಮಾರು 10 ಗಂಟೆಗೆ ಕ್ರೀಡಾ ಕಾರ್ಯಕ್ರಮದ ಉದ್ಘಾಟನೆಯುನ್ನು ಅತಿಥಿಗಳಾದ ಶ್ರೀಮತಿ ಜಯಲಕ್ಷ್ಮಿ ಸತ್ಯವಿಜಯ ರಾವ್ (ನಿವೃತ್ತ ಶುಶ್ರೂಷಕಿ, ಕೆ.ಎಂ.ಸಿ. ಮಣಿಪಾಲ ಆಸ್ಪತ್ರೆ) ಇವರು ದೀಪ ಬೆಳಗಿಸುವ ಮೂಲಕ ನಡೆಸಿಕೊಟ್ಟರು. ಮಾ। ಪರ್ಜನ್ಯರವರು ಪ್ರಾರ್ಥನೆ ನಡೆಸಿದರು. ನಂತರ ಎಳೆಯ ಮಕ್ಕಳಿಗೆ (1ನೇ ತರಗತಿಯ ಒಳಗಿನ) ಚೆಂಡು ಎಸೆಯುವ ಸ್ಪರ್ಧೆ ನಡೆಯಿತು. 1–4ನೇ ತರಗತಿಯ ಮಕ್ಕಳಿಗೆ

(5ನೇ ಪುಟಕ್ಕೆ....)



॥ ಜೈ ಶ್ರೀರಾಮ್ ॥

**ಸ್ಥಾನಿಕ ಮಹಾಮಂಡಲ (ರಿ.), ಮಂಗಳೂರು ಮತ್ತು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿ**

ಇದರ ಜಂಟಿ ಆಶ್ರಯದಲ್ಲಿ

**22–01–2024ರಂದು ಅಯೋಧ್ಯೆ ರಾಮ ಮಂದಿರ ಉದ್ಘಾಟನೆ ಪ್ರಯುಕ್ತ**

**ಸಂಜೆ 6.00 ರಿಂದ ರಾತ್ರಿ 9.00 ಗಂಟೆಯವರೆಗೆ**

ಶ್ರೀ ಶಾರದಾ ದೇವಸ್ಥಾನದಲ್ಲಿ 1000 ದೀಪ ಬೆಳಗಿಸಿ ಶ್ರೀ ರಾಮ ಪೂಜೆ

ಭಜನೆ : ಶ್ರೀ ಶಾರದಾ ಭಜನಾ ಮಂಡಳಿ ಉಡುಪಿ.

ಬೌದ್ಧಿಕ್ : ಪ್ರಕಾಶ್ ಮಲ್ಪೆ (ಸಾಮಾಜಿಕ ಚಿಂತಕರು)

ನಮ್ಮ ಸಮಾಜದ ಕರಸೇವಕರಿಗೆ ಸನ್ಮಾನ.

ಶ್ರೀ ರಾಮ ದೇವರಿಗೆ ಮಹಾಮಂಗಳಾರತಿ, ಬಳಿಕ ಉಪಾಹಾರ

ಈ ಎಲ್ಲ ಕಾರ್ಯಕ್ರಮಗಳಿಗೆ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ ಮತ್ತು ಸರ್ವಸದಸ್ಯರು

ಸ್ಥಾನಿಕ ಮಹಾಮಂಡಲ ಮಂಗಳೂರು ಹಾಗೂ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ.



ಚಿ। ಸಂಜಲ್ ಹಾಗೂ ಚಿ। ಸೌ। ನಂದಿತಾ

## ನೂತನ ವಧೂವರರಿಗೆ ಶುಭಾಶಯಗಳು

ಶ್ರೀಮತಿ ಶೈಲಜಾ ಮತ್ತು ಸಂದೀಪ್ ಶಾಸ್ತ್ರೀ ದಂಪತಿಯ ಪುತ್ರ ಚಿ। ಸಂಜಲ್ ಅವರ ವಿವಾಹವು ಶ್ರೀಮತಿ ಸ್ವಪ್ನ ಮತ್ತು ಜಯಪ್ರಕಾಶ್ ರಾವ್ ದಂಪತಿಯ ಪುತ್ರಿ ಚಿ। ಸೌ। ನಂದಿತಾ ರವರೊಂದಿಗೆ ತಾ.25.12.2023ರಂದು "ಶ್ರೀ ಶಾರದಾ ಮಂಟಪ"ದಲ್ಲಿ ಜರಗಿತು.

ನೂತನ ವಧುವರರಿಗೆ ಶುಭಾಶಯಗಳನ್ನು ಕೋರುವ :

ಶ್ರೀಮತಿ ಎಂ.ಕೆ. ವೇದಾವತಿ ಮತ್ತು ಎಂ.ಕೆ. ಸದಾಶಿವಯ್ಯ

ಶ್ರೀಮತಿ ಜ್ಯೋತಿ ಸಿ.ರಾವ್ ಮತ್ತು ಡಾ। ಚಾಮರಾಜ ರಾವ್

ಶ್ರೀಮತಿ ನಾಗವೇಣಿ ಅಮ್ಮ

ಈ ಶುಭ ಸಂದರ್ಭದಲ್ಲಿ ಡಾ। ಶೈಲಜಾ ಶಾಸ್ತ್ರಿ ಹಾಗೂ ಡಾ। ಸಂದೀಪ್ ಶಾಸ್ತ್ರಿಯವರು ಜನವರಿ ತಿಂಗಳ ಶ್ರೀಶಾರದಾ ಪತ್ರಿಕೆಯ ಪ್ರಾಯೋಜಕರಾಗಿದ್ದಾರೆ

# ಕಿರಿಯರ ಸಾರಥಿ ಭಗವದ್ಗೀತೆ

–ವೈ. ಮೋಹನರಾವ್

'ಭಗವದ್ಗೀತೆ'–ಇದೊಂದು ಅನುಪಮವಾದ ಪವಿತ್ರಗ್ರಂಥ. ಇದರಲ್ಲಿನ ಪ್ರತಿ ಶಬ್ದವೂ, ಪ್ರತಿಸಾಲುಗಳೂ ಜನರ ಜೀವನೋತ್ಸಾಹ ಮತ್ತು ಆನಂದವನ್ನು ಉತ್ಕರ್ಷಿಸುವ ಜ್ಞಾನಾಮೃತವಾಗಿದೆ. ಇದನ್ನು ಓದಿ, ಭಾವಾರ್ಥಗಳನ್ನು ಗ್ರಹಿಸುವುದು ಅತಿಮುಖ್ಯ. ಶ್ರದ್ಧೆ ಮತ್ತು ಏಕಾಗ್ರತೆಯ ಅಧ್ಯಯನದಿಂದ ಇದನ್ನು ಸಾಧಿಸಿದಲ್ಲಿ 'ಗೀತೆ' ಎಲ್ಲರ ಜೀವನದ ಮಾರ್ಗದರ್ಶಿಯಾಗಬಲ್ಲದು.

ಜೀವನದಲ್ಲಿ ಉತ್ಕೃಷ್ಟವಾದ ಗುರಿ ಇಟ್ಟುಕೊಂಡು ಶಾಂತಿ, ಪ್ರೇಮದೊಂದಿಗೆ, ಬದುಕು, ಸಾರ್ಥಕ ಪಡಿಸಿಕೊಳ್ಳಬೇಕೆಂಬ ಹಂಬಲ ಉಳ್ಳವರಿಗೆ 'ಭಗವದ್ಗೀತೆ'ಯೇ ಉತ್ತಮ ಸದ್ಗುರು. ಜೀವನ ಮೌಲ್ಯವನ್ನು ಅರಳಿಸಬಲ್ಲ ಸತ್ವ ಶಕ್ತಿವುಳ್ಳ ಗ್ರಂಥವನ್ನು ಕಿರಿಯ ವಯಸ್ಸಿನಿಂದಲೇ ಮಕ್ಕಳಿಗೆ ಪರಿಚಯಿಸಿದರೆ, ಮುಂದೆ ಅವರು ಆಳ ಅಧ್ಯಯನ ಮಾಡಿ ಸ್ವಸ್ಥ ಸಮಾಜದ ಸೃಷ್ಟಿಗೆ ಕಾರಣೀಭೂತರಾಗುವರು.

ಈ ನಿಟ್ಟಿನಲ್ಲಿ ಉಡುಪಿಯ ಹರಿಕೃಷ್ಣ ರಾವ್ ಎ. ಅವರು ಹೊರತಂದಿರುವ "ಕಿರಿಯರ ಸಾರಥಿ ಭಗವದ್ಗೀತೆ"–ಅಧ್ಯಾತ್ಮ ವಿದ್ಯಾಶಿಕ್ಷಣ ಕ್ಷೇತ್ರಕ್ಕೆ ಮೌಲಿಕ ಕೊಡುಗೆ ಎನಿಸಿದೆ.

ಶ್ರೀ ಹರಿಕೃಷ್ಣ ರಾವ್ ಎ. ಅವರು 1984 ರಿಂದ ಉಡುಪಿಯ ಸಂಸ್ಕೃತ ಕಾಲೇಜಿನ ಗ್ರಂಥಪಾಲಕರಾಗಿದ್ದು ಪುಸ್ತಕ ಪ್ರಪಂಚದೊಂದಿಗೆ ಇದ್ದು ಜೀವನದಲ್ಲಿ ಹೊಸ ಬೆಳಕನ್ನು ಕಂಡವರು. ತಾವು ಗಳಿಸಿದ ಜ್ಞಾನದ ಜ್ಯೋತಿಯನ್ನು ಎಲ್ಲೆಡೆಗೆ ಪಸರಿಸುತ್ತಿರಬೇಕೆಂಬ ಸಂಕಲ್ಪ ಉಳ್ಳವರು. ಪುಸ್ತಕ ಪ್ರೇಮದೊಂದಿಗೆ ಅಧ್ಯಾತ್ಮ ಜೀವನದ ಸವಿ ಉಂಡಿರುವ ಇವರು ವಿವಿಧ ಜನಪ್ರಿಯ ಪತ್ರಿಕೆಗಳ ಮೂಲಕ, ಪುಸ್ತಕಗಳ ಮೂಲಕ ತತ್ವಜ್ಞಾನದ ಸಿಹಿಯನ್ನು ಹಂಚುತ್ತಿದ್ದಾರೆ.

ಈ ಕೃತಿ ಭಗವದ್ಗೀತೆಯ ಹೂರಣವನ್ನು ಸರಳವಾಗಿಯೂ ಮತ್ತು ಸುಂದರವಾಗಿಯೂ ನಿರೂಪಿಸಿದೆ. ಭಗವದ್ಗೀತೆಯಲ್ಲಿರುವ 18 ಅಧ್ಯಾಯಗಳ ಯೋಗಗಳನ್ನು ಮನೋಜ್ಞವಾಗಿ ನಿರೂಪಿಸಿದ್ದಾರೆ. ಭಗವದ್ಗೀತೆಯು ಎಲ್ಲರ ಸಾರಥಿ ನಾವೆಲ್ಲರೂ ಅದರ ಮುಂದೆ ಕಿರಿಯರೇ. ಈ ಪುಸ್ತಕವನ್ನು ಓದುವುದರಿಂದ ಕಿರಿಯರಿಗೆ ಭಗವದ್ಗೀತೆಯ ಇನ್ನು ಹಲವು ವ್ಯಾಖ್ಯಾನಗಳ, ಕೃತಿಗಳನ್ನು ಅವಲೋಕಿಸಬೇಕೆಂಬ ಹಂಬಲ ಹೆಚ್ಚುವುದರಲ್ಲಿ ಸಂದೇಹವಿಲ್ಲ ಎಂದು ಈ ಪುಸ್ತಕದ 'ಮುನ್ನುಡಿ'ಯಲ್ಲಿ ಶ್ರೀ ಕೆ. ರಾಮಮೂರ್ತಿ ರಾವ್, ಮೈಸೂರು, ಅವರು ನುಡಿದಿದ್ದಾರೆ.

1 ಅರ್ಜುನವಿಷಾದಯೋಗ – ಭಗವದ್ಗೀತೆ ಪ್ರಾರಂಭವಾಗುವುದು ಅರ್ಜುನನ ವಿಷಾದದಿಂದ. ವಾಲ್ಮೀಕಿಯ ವಿಷಾದದಿಂದ ರಾಮಾಯಣ ಬರೆಯಲ್ಪಟ್ಟಿತು. ಬುದ್ಧನ ವಿಷಾದದಿಂದ ಅವನಿಗೆ ನಿರ್ವಾಣ ಸಿಕ್ಕಿತು. ಅಶೋಕನ ವಿಷಾದದಿಂದ ಅಹಿಂಸೆಯ ಪ್ರಚಾರವಾಯಿತು. ಅರ್ಜುನನ ವಿಷಾದದಿಂದ ಲೋಕಕ್ಕೆ ಭಗವಂತನ ಗೀತೆ ಸಿಕ್ಕಿತು......ಅರ್ಜುನ ಕುರುಕ್ಷೇತ್ರದಲ್ಲಿ ತನ್ನ ಗುರುಹಿರಿಯರನ್ನು, ಬಂಧು–ಬಾಂಧವರನ್ನು ನೋಡಿ ಅವರನ್ನು ಕೊಲ್ಲುವುದು ಅಧರ್ಮವೆಂದು ವ್ಯಾಖ್ಯಾನಿಸುವನು. ತನ್ನ ಕ್ಷತ್ರಿಯ ಧರ್ಮವನ್ನು ಅಲ್ಪ–ದೃಷ್ಟಿಗೆ ತಳ್ಳಿ, ತನ್ನವರನ್ನು ಕಾಪಾಡುವುದೊಂದೇ ಧರ್ಮವೆಂದು ತಿಳಿಯುವನು. ತನ್ನವರನ್ನು ಕೊಲ್ಲುವುದು ಮಹಾಪಾಪವೆಂದು ವಾದಿಸುವನು. ನರಕಕ್ಕೆ ಕಾರಣವಾಗುವ ಯುದ್ಧ ಬೇಡವೆಂದು ಶ್ರೀಕೃಷ್ಣನ ಬಳಿ ತನ್ನ ಮನಸ್ಸಿನ ತೊಳಲಾಟವನ್ನು ತೋಡಿಕೊಳ್ಳುವನು.

ವಿದ್ಯಾರ್ಥಿಗಳು ಸೋಲಿಗೆ ಎಂದೂ ಹೆದರಬಾರದು. ವಿಷಾದದಿಂದ ಆತ್ಮಹತ್ಯೆಗೆ ಪ್ರಯತ್ನಿಸದೆ, ಅರ್ಜುನನಂತೆ ಯೋಗ್ಯ 'ಗುರು' ಎಂದರೆ 'ಹಿರಿಯ'ರನ್ನು,




ತಂದೆತಾಯಿಗಳನ್ನು ಆಶ್ರಯಿಸಿ, ತಮ್ಮ ಕೊರಗನ್ನು ಹೇಳಿಕೊಳ್ಳಬೇಕು. ತಮ್ಮ ಮನಸ್ಸಿನ ದುಃಖವನ್ನು ಹೇಳಿದ ಮೇಲೆ, ಹಿರಿಯರ ಮಾತನ್ನು ಕೇಳಿ ಅಥವಾ ಒಳ್ಳೆಯ ಪುಸ್ತಕಗಳ ಮಾರ್ಗದರ್ಶನ ಪಡೆದುಕೊಂಡು, ವಿಷಾದದಿಂದ ಹೊರಬಂದು ತಮ್ಮ ಗುರಿಯ ಕಡೆಗೆ ಹೆಚ್ಚಿನ ಉತ್ಸಾಹದಿಂದ ಸಾಗಬೇಕು. ಆಗಲೇ ಸಿದ್ಧಿ ಎನ್ನುವುದು ವಿಷಾದಯೋಗದ ಸಂದೇಶ.

2 ಸಾಂಖ್ಯಯೋಗ–ಅಪಾಯಕರ ಖಿನ್ನತೆ ಅರ್ಜುನನಿಗೆ ಎಲ್ಲಿಂದ ಬಂತು?

(3ನೇ ಪುಟಕ್ಕೆ....)

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ



ತಾ. 25–26 ಡಿಸೆಂಬರ್ 2023 ರಂದು ಶೃಂಗೇರಿಯಲ್ಲಿ ಆಹ್ವಾನಿತ ಶ್ರೀ ಶಾರದಾ ಭಜನಾ ಮಂಡಳಿ, ಉಡುಪಿ, ಶಂಕರ ಪ್ರತಿಷ್ಠಾನ, ಕಾರ್ಕಳ ಹಾಗೂ ಶ್ರೀ ಜ್ಞಾನಶಕ್ತಿ ಭಜನಾ ಬಳಗ, ಬಾರಕೂರು ಒಟ್ಟಾಗಿ ಧನುರ್ಮಾಸದ ಭಜನಾ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು.



ಕೋಟ ಹಿರೇ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಕೋಟಿ ಗಾಯತ್ರಿಯಾಗ ಮತ್ತು ಲಕ್ಷ ಲಲಿತಾ ಸಹಸ್ರನಾಮಯಾಗದ ಸಂದರ್ಭದಲ್ಲಿ ಶ್ರೀ ಶಾರದಾ ಭಜನಾ ಮಂಡಳಿಯ ಸದಸ್ಯರು.



ತಾ.17.12.2023ರಂದು ಬೆಂಗಳೂರು ಜ್ಞಾನಶಕ್ತಿ ಸುಬ್ರಹ್ಮಣ್ಯ ಸಭಾದ ಮಹಾಸಭೆಯಲ್ಲಿ ಶ್ರೀಮತಿ ಸಬಿತಾ ಶ್ರೀನಿವಾಸ್ ರಾವ್ ಅವರ ಸಾಧನೆಯನ್ನು ಗುರುತಿಸಿ ಗೌರವಿಸಲಾಯಿತು.



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.50%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 5 ವರ್ಷದ ತನಕ | : 9% |
| 5 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016–17ರಿಂದ 2021–22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಕಿರಿಯರ ಸಾರಥಿ ಭಗವದ್ಗೀತೆ

...2ನೇ ಪುಟದಿಂದ

ಎಂದು ಶ್ರೀಕೃಷ್ಣ ಪ್ರಶ್ನಿಸುವನು. 'ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ'–ಎದೆಯ ಳುಕನ್ನು ತ್ಯಜಿಸಿ, ಎದ್ದೇಳು ಓ ಪರಂತಪ (ಶತ್ರುಗಳನ್ನು ಹೆದರಿಸುವವನು)! ಎನ್ನುವ ನೇರ ಆದೇಶವು ಭಗವಂತನಿಂದ ಈ ಅಧ್ಯಾಯದಲ್ಲಿ ನೀಡಲ್ಪಟ್ಟಿದೆ.

ಕುಂದಿದ ಮನಸ್ಸನ್ನು ಎತ್ತುವ ಕೆಲಸ ಅಷ್ಟು ಸುಲಭವಲ್ಲ. ಅದಕ್ಕೆಂದು ಶ್ರೀಕೃಷ್ಣ ಅರ್ಜುನನ ಹೃದಯದೊಳಗೆ ಹೊಕ್ಕು ಆತನ ಭಾವನೆಗಳನ್ನು ಆತ್ಮದ ಕಡೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತಾನೆ. ನೀನು ದೇಹ–ಮನಸ್ಸುಗಳಲ್ಲ. ನಿನ್ನ ಜನ್ಮ ಇದೊಂದೇ ಅಲ್ಲ. ಹುಟ್ಟುಸಾವುಗಳು ಶರೀರಕ್ಕೆ. ಆತ್ಮಕ್ಕೆ ಸಾವಿಲ್ಲ. ಆತ್ಮದ ಶಕ್ತಿ ಅಪಾರ. ಅದು ಸನಾತನ. ಅದನ್ನು ತಿಳಿದವ ಶಾಂತಿ ಮತ್ತು ಸ್ಥಿತಪ್ರಜ್ಞೆಯನ್ನು ಗಳಿಸುವನು.

3 ಕರ್ಮಯೋಗ – ನಿಯತವಾದ ಕರ್ಮವನ್ನು ಪ್ರತಿಯೊಬ್ಬರೂ ಮಾಡಬೇಕೆಂದು ಶ್ರೀಕೃಷ್ಣ ಹೇಳುವನು....ಲೋಕದ ಸಮಗ್ರ ಉದ್ಧಾರವೇ ಕರ್ಮಯೋಗದ ಸಾರವು. ತನ್ನ ಕರ್ಮ ಯಜ್ಞವಾಗುವಂತೆ ನೋಡಿಕೊಳ್ಳುವುದು ಪ್ರತಿ ಮನುಷ್ಯನ ಕರ್ತವ್ಯ. ಸಂಬಳ ಪಡೆದುಕೊಳ್ಳುವ ನೌಕರ ಅದಕ್ಕೆ ಸರಿಯಾದ ಕೆಲಸವನ್ನು ಮಾಡಬೇಕು. ಸಂಪತ್ತನ್ನು ಕೂಡಿಹಾಕುವ ಶ್ರೀಮಂತ ಅದನ್ನು ಜನಸೇವೆಗೆ ಉಪಯೋಗಿಸಬೇಕು.

'ಆತ್ಮ'ಕ್ಕೆ ಹತ್ತಿರವಾಗಬೇಕಾದರೆ ಸಾತ್ವಿಕ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಶ್ರೀಕೃಷ್ಣ ಹೇಳುವನು. ಅದಕ್ಕೆ ಪೂರಕವಾದ ಆಹಾರ, ವಿಹಾರ, ಯೋಚನೆಗಳನ್ನು ಬೆಳೆಸಿಕೊಳ್ಳ ಬೇಕೆನ್ನುವನು. ಮನಸ್ಸು ಮತ್ತು ಹೊಟ್ಟೆಗೆ ಸ್ವೀಕರಿಸುವ ಈ ಒಳ್ಳೆಯ ಆಹಾರವನ್ನೇ 'ಅನ್ನ' ಎನ್ನುವನು ಶ್ರೀಕೃಷ್ಣ. ಅದು ಭಗವಂತನ ದರ್ಶನ ಮಾಡಿಸುವುದರಿಂದ ಅದಕ್ಕೆ 'ಅನ್ನಬ್ರಹ್ಮ'ವೆಂದು ಗೀತೆ ಕರೆದಿದೆ.

4 ಜ್ಞಾನಯೋಗ–'ಆತ್ಮ'ನಿಗೆ ಸಂಬಂಧಪಟ್ಟ ಸಂಶಯಗಳನ್ನು ನಿವಾರಿಸಿಕೊಳ್ಳಲು 'ಜ್ಞಾನ' ಒಂದೇ ಮಾರ್ಗ. ಈ 'ಜ್ಞಾನ'ವು ತತ್ತ್ವವನ್ನು ಅರಿತ ಗುರುವಿನಿಂದ ಮಾತ್ರ ಲಭ್ಯ. ಅದಕ್ಕಾಗಿ 'ಗುರುಶುಶ್ರೂಷೆ' ಮತ್ತು ಪರಿಪ್ರಶ್ನೆಗಳಿಂದ 'ಶಿಷ್ಯ' ಜ್ಞಾನವನ್ನು ಪಡೆದುಕೊಳ್ಳಬೇಕು. ಪುಸ್ತಕಜ್ಞಾನ ಪುಸ್ತಕ ಓದಿದರೆ ಲಭ್ಯ. ಆದರೆ ಅದು ಮಸ್ತಕದ 'ಜ್ಞಾನ'ವಾಗಲು 'ಜ್ಞಾನ'ದ ಅನುಷ್ಠಾನ ಮತ್ತು ಅನುಭವಗಳು ಅತ್ಯಗತ್ಯ. ಅದು 'ಗುರು'ಸೇವೆಯಿಂದ ಲಭ್ಯವೆಂದು ಶ್ರೀಕೃಷ್ಣ ಹೇಳುವನು...ಆದರೆ, ಜ್ಞಾನಯಜ್ಞವೇ ಶ್ರೇಷ್ಠ ಎನ್ನುವನು ಶ್ರೀಕೃಷ್ಣ. ಎಲ್ಲ ಕರ್ಮಗಳ ಗುರಿ 'ಜ್ಞಾನ'–'ಆತ್ಮ'. ಪರಮಾತ್ಮಜ್ಞಾನ, 'ನಹಿ ಜ್ಞಾನೇನ ಸದೃಶಮ್'–ಈ ಪ್ರಪಂಚದಲ್ಲಿ ಜ್ಞಾನಕ್ಕೆ ಸಮನಾದ ವಸ್ತು ಬೇರೊಂದಿಲ್ಲ. 'ಶ್ರದ್ಧಾವಾನ್ ಲಭತೇ ಜ್ಞಾನಮ್'–ಆಸಕ್ತಿಯು ಜ್ಞಾನವನ್ನು ಪಡೆಯಲು ಬೇಕಾದ ಅರ್ಹತೆ. ವಿದ್ಯಾರ್ಥಿಗಳು ಪುಸ್ತಕ, ಕಂಪ್ಯೂಟರ್‌ಗಳು ಕೊಡುವ ಮಾಹಿತಿಗಳನ್ನು ತಿಳಿದುಕೊಳ್ಳುವ ಆಸಕ್ತಿ ಅಥವಾ 'ಶ್ರದ್ಧೆ' ಇರದಿದ್ದಲ್ಲಿ ಆತ 'ಜ್ಞಾನ'ವನ್ನು ಗಳಿಸಲಾರ.

5 ಸಂನ್ಯಾಸಯೋಗ–ಮಾನವರಲ್ಲಿ ಇರುವ ಒಳ್ಳೆಯ ವಸ್ತು ಯಾವುದು? ಎಂದರೆ 'ಬುದ್ಧಿ' ಎನ್ನಬಹುದು. ಆದರೆ ಬುದ್ಧಿಯಿಂದಲೂ ಉತ್ತಮವಾದದ್ದು 'ಆತ್ಮ'. ಈ ಸತ್ಯದಲ್ಲಿ ಮನಸ್ಸನ್ನು ಇರಿಸಿದವನೇ 'ಸಂನ್ಯಾಸಿ'. ಒಳ್ಳೆಯದರಲ್ಲಿ ನ್ಯಾಸ ಎಂದರೆ ಇಡುವಿಕೆ. ಯಾರ ಮನಸ್ಸು, ಬುದ್ಧಿಗಳು ಒಳ್ಳೆಯದನ್ನು ಆಶ್ರಯಿಸಿಕೊಂಡಿರುತ್ತದೆಯೋ ಆತನೇ 'ಸಂನ್ಯಾಸಿ'. ಡ್ರೆಸ್ ಮಾತ್ರ 'ಸಂನ್ಯಾಸಿ' ಅಲ್ಲ! ಡ್ರೆಸ್ಸಿಗೆ ಮೋಹಗೊಂಡು ಉದ್ದಂಡ ನಮಸ್ಕಾರ ಮಾಡಿದರೆ ಪ್ರಯೋಜನವಿಲ್ಲ. "ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ। ನಿರ್ದ್ವಂದ್ವೋ ಹಿ ಮಹಾ ಬಾಹೋ ಸುಖಂ ಬಂಧಾತ್ ಪ್ರಮುಚ್ಯತೇ॥" –ಯಾರು ದ್ವೇಷಿಸುವುದಿಲ್ಲವೋ ಅವರು ನಿತ್ಯಸಂನ್ಯಾಸಿ ಎಂದು ತಿಳಿ. ಮಹಾಬಾಹುವೇ! ಏಕೆಂದರೆ ದ್ವಂದ್ವವಿಲ್ಲದವನು ಸುಖವಾಗಿ ಬಂಧನದಿಂದ ಪಾರಾಗುತ್ತಾನೆ.

6 ಧ್ಯಾನಯೋಗ–"ಉದ್ಧರೇ–ದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ । ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವ ರಿಪುರಾತ್ಮನಃ॥"–ತನ್ನನ್ನು ತನ್ನಿಂದಲೇ ಉದ್ಧಾರ ಮಾಡಿಕೊಳ್ಳಬೇಕು; ತನ್ನನ್ನು ಕುಗ್ಗಿಸಿಕೊಳ್ಳಬಾರದು. ಏಕೆಂದರೆ ತಾನೇ ತನ್ನ ಬಂಧುವು, ತಾನೇ ತನ್ನ ಶತ್ರುವು. ಈ ರೀತಿ ಶ್ರೀಕೃಷ್ಣ ಪ್ರತಿಯೊಬ್ಬನೂ ತನ್ನ 'ಉದ್ಧಾರ'ಕ್ಕೆ ತಾನೇ ಪ್ರಯತ್ನಿಸಬೇಕೆಂದು ಆದೇಶಿಸಿರುವನು. ಮಗುವಿಗೆ ಜ್ವರ ಬಂದರೆ, ಅದರ ಅಮ್ಮ ಇಂಜೆಕ್ಷನ್ ಚುಚ್ಚಿಸಿಕೊಂಡರೆ ಮಗುವಿನ ಜ್ವರ ಇಳಿಯುವುದಿಲ್ಲ! ಮನಸ್ಸನ್ನು ನಿಗ್ರಹಿಸುವ ಅದನ್ನು ಆತ್ಮದ ಕಡೆ ನಿಲ್ಲಿಸಿ, ಗೆಲ್ಲುವ ವಿದ್ಯೆಯನ್ನು ಧ್ಯಾನವು ತಂದುಕೊಡುತ್ತದೆ. ಗೆಲ್ಲದ ಆತನ ಮನಸ್ಸು, ಜೀವನ ಪೂರ್ತಿ ಶತ್ರುವಿನಂತೆ ವರ್ತಿಸುತ್ತಿರುತ್ತದೆ.

7 ಜ್ಞಾನ–ವಿಜ್ಞಾನಯೋಗ–ಬರಿಯ ಜ್ಞಾನವೆಂದರೆ ಬೌದ್ಧಿಕವಾಗಿ ತಿಳಿದುಕೊಳ್ಳುವುದು. ವಿಜ್ಞಾನ ಎಂದರೆ ಅನುಷ್ಠಾನಕ್ಕೆ ತಂದದ್ದು, ಅನುಭವದಿಂದ ಕೂಡಿದ್ದು; ಬರಿಯ ಊಹೆ–ಸಿದ್ಧಾಂತಗಳಲ್ಲ. ಇಲ್ಲಿ ವಿಜ್ಞಾನವೆಂದರೆ ತನ್ನ ಅಂತರಾಳವನ್ನು ಅನುಭವಿಸಿದ ಸತ್ಯ. ಅನುಭವದ ಶ್ರೇಷ್ಠ ಪ್ರಮಾಣ ವಿಜ್ಞಾನಕ್ಕಿದೆ. ಅಂತಹ ಅನುಭವಗಳ ವಿಜ್ಞಾನದಿಂದ ದೇವರ ಮಹಿಮೆಯನ್ನು ಶ್ರೀಕೃಷ್ಣ ಒಂದೊಂದಾಗಿ ವಿವರಿಸುವನು.

ಶ್ರೀಕೃಷ್ಣನಿಗೆ ಎಲ್ಲಾ ಭಕ್ತರೂ ಉತ್ತಮರೇ. ಆದರೆ ಆತ ಜ್ಞಾನಿಯನ್ನು 'ನನ್ನ ಆತ್ಮ' ಎಂದಿರುವನು. ಏಕೆಂದರೆ ಆತ ತನ್ನನ್ನು ಪಡೆಯುವುದೇ ಶ್ರೇಷ್ಠಗತಿ ಎಂದು ತಿಳಿದಿರುವನು.

8 ಅಕ್ಷರಬ್ರಹ್ಮಯೋಗ – ಈ ಅಧ್ಯಾಯದಲ್ಲಿ ಅರ್ಜುನ ಪರಬ್ರಹ್ಮನ ಸ್ವರೂಪ, ಮರಣ ಸಮಯದಲ್ಲಿ ಯೋಗಿಗಳು ಭಗವಂತನನ್ನು ಅರಿತುಕೊಳ್ಳುವ ಸ್ಥಿತಿ ಇತ್ಯಾದಿಗಳ ಬಗ್ಗೆ ಪ್ರಶ್ನಿಸುತ್ತಾನೆ....ಆ ಯೋಚನೆಗಳ ಜ್ಞಾನವೇ 'ಮನೋಮಯ'ವಾದ ಜಗತ್ತು. ಈ ಪ್ರಾರಂಭದ ಅಕ್ಷರವೇ ಮನಸ್ಸಿನ ಸೂಕ್ಷ್ಮ ಸ್ವರೂಪ. ಅದನ್ನೇ 'ಓಂ'ಕಾರವೆನ್ನುವರು. ಆ ಪ್ರಾರಂಭದ ಅಕ್ಷರವು ಬ್ರಹ್ಮನ ಸ್ವರೂಪವೆಂದು ಅರಿತವರು, ಅದನ್ನು ಆಶ್ರಯಿಸಿ ಬ್ರಹ್ಮವನ್ನು ಪಡೆಯುವರು. ಆ 'ಓಂ'ಕಾರದ ಸಹಾಯದಿಂದ 'ಬ್ರಹ್ಮ'ನಲ್ಲಿ ಒಂದಾಗುವರು. ಅದುವೇ ಅಕ್ಷರ ಬ್ರಹ್ಮಯೋಗ.

9 ರಾಜವಿದ್ಯಾ–ರಾಜಗುಹ್ಯಯೋಗ – ಪರಮಾತ್ಮನೇ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣ ಎಂದು ತಿಳಿದು ಆತನನ್ನು ಆರಾಧಿಸುವ, ಅನನ್ಯ ಭಾವದಿಂದ ಚಿಂತಿಸುವ, ಭಜಿಸುವ ಭಕ್ತರ ಯೋಗಕ್ಷೇಮವನ್ನು ವಹಿಸಿಕೊಳ್ಳುತ್ತೇನೆಂದು ಶ್ರೀಕೃಷ್ಣ ಅಭಯ ನೀಡುವನು. ಭಕ್ತಿಯಿಂದ ಮತ್ತು ಶುದ್ಧ ಚಿತ್ತದಿಂದ ಸಮರ್ಪಿಸುವ ಎಲೆ, ಹೂವು, ಹಣ್ಣು, ನೀರು ಯಾವುದನ್ನು ಕೊಡುವರೋ ಅದನ್ನು ಸ್ವೀಕರಿಸುವೆನು ಎನ್ನುವನು. ಶುದ್ಧ ಸಂಕಲ್ಪವನ್ನು ಧರಿಸಿದಾಕ್ಷಣ ಎಂತಹ ದುರಾಚಾರಿಯೂ ಸಾಧುವೆಂದು ತಿಳಿಯತಕ್ಕದೆಂದು ಶ್ರೀಕೃಷ್ಣ ಹೇಳುತ್ತಾನೆ. ಅದಕ್ಕೆ ಶ್ರೀಕೃಷ್ಣ ಸಂಶಯ ರಹಿತನಾಗಿರು, ನನ್ನಲ್ಲಿ ಮನಸ್ಸಿಡು, ನನ್ನ ಭಕ್ತನಾಗು, ನನ್ನನ್ನು ಪೂಜಿಸು, ನನ್ನನ್ನೇ ನಮಸ್ಕರಿಸು, ನನ್ನಲ್ಲಿ ಪರಾಯಣನಾಗಿ ನನ್ನೊಂದಿಗೆ ಆತ್ಮವನ್ನು ಸೇರಿಸು. ನೀನು ನನ್ನನ್ನು ಹೊಂದುತ್ತೀಯೆ ಎಂದು ನೇರವಾಗಿ ಆಹ್ವಾನಿಸುವನು.

10 ವಿಭೂತಿಯೋಗ–ದೇವತೆಗಳು, ಮಹರ್ಷಿಗಳು ಮಾನವರೆಲ್ಲರಿಗಿಂತಲೂ ಬುದ್ಧಿವಂತರು ಮತ್ತು ಮುಂದುವರಿದವರು ಎಂಬ ಭಾವನೆ. ಇವರು ಕೂಡ ಭಗವಂತನ ಆದಿಯನ್ನು ಅರಿಯರು. ಏಕೆಂದರೆ ಇವರೆಲ್ಲಾ ಬಂದದ್ದು ಅನಂತರ. ಹಾಗಾಗಿ ಭಗವಂತ ಹೇಳುವನು, ನನ್ನ ಆದಿಯನ್ನು ಯಾರೂ ಅರಿತವರಿಲ್ಲ. ನಾನೇ ಎಲ್ಲರಿಂದಲೂ ಸನಾತನ ಎಂದು. ಅರ್ಜುನ ಪುನಃ ಶ್ರೀಕೃಷ್ಣನಲ್ಲಿ ನಿನ್ನ ಯೋಗ ಮತ್ತು ವಿಭೂತಿಯನ್ನು ವಿಸ್ತಾರವಾಗಿ ಹೇಳೆಂದು ಕೇಳುವನು – ಆಗ ಶ್ರೀಕೃಷ್ಣ ನನ್ನ ವಿಭೂತಿಯ ವಿಸ್ತಾರಕ್ಕೆ ಕೊನೆಯಿಲ್ಲ. ದಿವ್ಯವಾದ ವಿಭೂತಿಗಳಲ್ಲಿ ಮುಖ್ಯವಾಗಿರುವುದನ್ನು ಮಾತ್ರ ಹೇಳುತ್ತೇನೆ ಎನ್ನುವನು....ನಾನು ಈ ಜಗತ್ತನ್ನು ಒಂದೇ ಅಂಶದಿಂದ ಧರಿಸಿದ್ದೇನೆ. ಈ ಒಂದು ಅಂಶವೇ ನಮ್ಮೊಳಗಿನ 'ಆತ್ಮ' ಎನ್ನುವುದೇ ಭಾವಾರ್ಥ. ಆತ್ಮವೇ ಸರ್ವಶ್ರೇಷ್ಠವಾದ ವಿಭೂತಿ. ಅದೇ ಶ್ರೀಮಂತಿಕೆ. ಅದನ್ನು ಸಾಧಿಸಲು ಪ್ರಯತ್ನಿಸಬೇಕು.

11 ವಿಶ್ವರೂಪದರ್ಶನಯೋಗ–ಶ್ರೀಕೃಷ್ಣ ತನ್ನ ವಿಶ್ವರೂಪವನ್ನು ತೋರಿಸಿ, ಹಿಂದೆ ವಿಭೂತಿ ಯೋಗದಲ್ಲಿ ಹೇಳಿದ ಎಲ್ಲವನ್ನೂ ಪ್ರಮಾಣರೂಪದಲ್ಲಿ ತೋರಿಸಿ, ಅರ್ಜುನನನ್ನು ಅಲ್ಲದೇ ದೇವದೇವತೆಗಳನ್ನು ರೋಮಾಂಚನಗೊಳಿಸಿ ದಂಗುಬಡಿಸುತ್ತಾನೆ. ಕೊಚ್ಚಿ ಕೊಂಡ ಉಪದೇಶವಲ್ಲ, ಇದೆಲ್ಲಾ ಸತ್ಯದ ಬೋಧನೆ ಎಂದು ವಿಶ್ವಕ್ಕೆ ತೋರಿಸಿರುವವನು ಶ್ರೀಕೃಷ್ಣ. ಇದು ಭಗವದ್ಗೀತೆಯ ಪಾರಮ್ಯಕ್ಕೆ ಸಾಕ್ಷಿ. ಬ್ರಹ್ಮಾಂಡವನ್ನು ಧರಿಸಿರುವ ದರ್ಶನವು 'ವಿಶ್ವರೂಪ'ದಲ್ಲಿದೆ. ಇದನ್ನು ನೋಡಲು ಶ್ರೀಕೃಷ್ಣ ಅರ್ಜುನನಿಗೆ ದಿವ್ಯದೃಷ್ಟಿಯನ್ನು ಕರುಣಿಸಿದ್ದಾನೆ. ಆತನು ನೀಡಿರುವ ದಿವ್ಯದೃಷ್ಟಿಯು ಯೋಗಿಗಳು ನಿರ್ವಿಕಲ್ಪ ಸಮಾಧಿಯಲ್ಲಿ ಪಡೆದುಕೊಳ್ಳುವ ದಿವ್ಯದೃಷ್ಟಿ.

12 ಭಕ್ತಿಯೋಗ–ಭಕ್ತಿಯೋಗದಲ್ಲಿ ಶ್ರೀಕೃಷ್ಣ ಸ್ಪಷ್ಟವಾಗಿ ತಿಳಿಸಿದ್ದಾನೆ. 'ಭಕ್ತಿ' ಎಂದರೆ ಸ್ತುತಿಸುತ್ತಾ, ಹೊಗಳುಭಟ್ಟನಾಗಿ ಇರುವುದಲ್ಲ. ಯಾರ ಹೃದಯ ಭಗವಂತನ ಸೃಷ್ಟಿಯನ್ನು ಪ್ರೇಮಭಾವದಿಂದ ಕಾಣುವುದೋ, ಯಾರ ಹೃದಯ ಧರ್ಮದಿಂದ ಕೂಡಿರುವುದೋ, ಯಾರು ಏನೇ ಬಂದರೂ ಭಗವಂತನ ಕೃಪೆಯೆಂದು ಸ್ವೀಕರಿಸುವರೋ, ಅಂತಹ ಪ್ರಸನ್ನಮನಸ್ಸಿನವನು ತನಗೆ ಪ್ರಿಯ ಎನ್ನುವನು....ಒಳ್ಳೆಯ ಗುಣಗಳನ್ನೆಲ್ಲ ತಮ್ಮ ಮನಸ್ಸೆಂಬ ಹೂದೋಟದಲ್ಲಿ ಆರೈಕೆ ಮಾಡಿ ಭಗವಂತನಿಗೆ ಶ್ರದ್ಧೆಯಿಂದ ಅರ್ಪಿಸುತ್ತಿರುವ ಭಕ್ತರು ಆತನಿಗೆ ಪ್ರಿಯ.

13 ಕ್ಷೇತ್ರ–ಕ್ಷೇತ್ರಜ್ಞಯೋಗ–ಶ್ರೀಕೃಷ್ಣ ಹೇಳುವನು: ಎಲ್ಲ ಕ್ಷೇತ್ರಗಳಲ್ಲಿರುವ 'ಕ್ಷೇತ್ರಜ್ಞ' ನಾನು ಎನ್ನುವನು. ಇವೆರಡು ಹೇಗೆ ಕೂಡಿವೆ ಎನ್ನುವುದನ್ನು ವಿಸ್ತರಿಸುತ್ತಾ ದೇಹದ ಅಂಟಿನಿಂದ 'ಆತ್ಮ'ವನ್ನು ಬಿಡುಗಡೆಗೊಳಿಸುವ ಉಪಾಯವನ್ನು ಶ್ರೀಕೃಷ್ಣ ತಿಳಿಸುವನು. ಈ ದೇಹದಲ್ಲಿ ಪರಮಪುರುಷನು ಸಾಕ್ಷಿ, ಅನುಮೋದಿಸುವವನು. ಭರ್ತೃ, ಭೋಕ್ತೃ, ಮಹೇಶ್ವರ ಮತ್ತು ಪರಮಾತ್ಮ ಎಂದು ಹೇಳಲ್ಪಡುವವನು. ಆತನೇ ಕ್ಷೇತ್ರಜ್ಞ, ಸರ್ವಪ್ರಕಾರದಿಂದಲೂ ಪ್ರಕೃತಿಯೇ ಕರ್ಮಗಳನ್ನೆಲ್ಲಾ ಮಾಡುವುದು ಮತ್ತು ತಾನು ಅಕರ್ತೃ ಎಂದು ಯಾವನು ನೋಡುತ್ತಾನೆಯೋ ಅವನೇ ನೋಡುತ್ತಾನೆ. ಅರ್ಜುನ, ಒಬ್ಬನೇ ಸೂರ್ಯ ಈ ಲೋಕವನ್ನೆಲ್ಲಾ ಹೇಗೆ ಪ್ರಕಾಶಿಸುತ್ತಿರುವನೋ ಹಾಗೆ ಕ್ಷೇತ್ರಜ್ಞನೂ ಸಮಸ್ತ ಕ್ಷೇತ್ರವನ್ನು ಪ್ರಕಾಶಿಸುತ್ತಿರುವನು.

14 ಗುಣತ್ರಯವಿಭಾಗಯೋಗ–ಗೀತೆಯ ಪ್ರಕಾರ ಈ ಪ್ರಪಂಚವು ಸತ್ತ್ವ, ರಜಸ್ಸು ಮತ್ತು ತಮೋಗುಣಗಳ ಸಂಮಿಶ್ರಣದಿಂದ ಆಗಿರುತ್ತದೆ. ಇವು ಯಾವಾಗಲೂ ಒಟ್ಟಿಗೇ ಇರುವುವು. ಅಥವಾ ಒಂದೇ ಗುಣವು ಕರ್ಮಕ್ಕೆ ಅನುಗುಣವಾಗಿ ಸತ್ತ್ವ, ರಜಸ್ಸು ಮತ್ತು ತಮೋಗುಣವಾಗಿ ಕಾಣಬಹುದು.... ಶ್ರೀಕೃಷ್ಣ ಹೇಳುವನು: ಸತ್ತ್ವ, ರಜಸ್ಸು, ತಮಸ್ಸು ಎಂಬ ಪ್ರಕೃತಿಯಿಂದ ಹುಟ್ಟಿದ ಗುಣಗಳು ಅವ್ಯಯನಾದ ಆತ್ಮನನ್ನು ದೇಹದಲ್ಲಿ ಬಂಧಿಸುತ್ತದೆ. ಒಂದರ್ಥದಲ್ಲಿ ಸತ್ತ್ವ ಎನ್ನುವುದು ಚಿನ್ನದ ಕೈಕೋಳ; ರಜಸ್ಸು ಎನ್ನುವುದು ಬೆಳ್ಳಿಯ ಕೈಕೋಳ; ತಮಸ್ಸು ಎನ್ನುವುದು ಕಬ್ಬಿಣದ ಕೈಕೋಳ; ಈ ಮೂರನ್ನು ದಾಟಿದವ ಬಂಧಮುಕ್ತನಾದ ಯೋಗಿ.

15 ಪುರುಷೋತ್ತಮಯೋಗ–ಈ ಸಂಸಾರದ ಪುರುಷೋತ್ತಮನೇ ಭಗವಂತ. ಯಾರು ಆತನನ್ನು ತಿಳಿದು ಕರ್ಮದಲ್ಲಿ ನಿರ್ಲಿಪ್ತತೆಯನ್ನು ಅಳವಡಿಸಿಕೊಳ್ಳುವನೋ, ಆತ ಕತ್ತಿಯಿಂದ ವೃಕ್ಷವನ್ನು ಕಡಿದಂತೆ, ಸಂಸಾರವೃಕ್ಷವನ್ನು ಕತ್ತರಿಸಿಕೊಂಡು ಅವ್ಯಯನಾದ ಪರಮಾತ್ಮನಲ್ಲಿ ಸೇರುತ್ತಾನೆ.

ಈ ಲೋಕದಲ್ಲಿ ನಾಶವಾಗುವ ಮತ್ತು ನಾಶವಾಗದ ಎರಡು ಬಗೆಯ ಪುರುಷರು ಇದ್ದಾರೆ. ಸರ್ವಪ್ರಾಣಿಗಳು ನಾಶವಾಗುವವು. ಅವುಗಳಲ್ಲಿ ನಾಶವಾಗದವನೇ ಕೂಟಸ್ಥ. ಆದರೆ ಕ್ಷರ ಮತ್ತು ಅಕ್ಷರಗಳಿಗಿಂತ ಬೇರೆಯಾದ ಪುರುಷೋತ್ತಮನನ್ನು ಪರಮಾತ್ಮನೆಂದು ಕರೆಯುತ್ತಾರೆ.

16 ದೈವಾಸುರಸಂಪದ್ವಿಭಾಗಯೋಗ–ದೈವಾಂಶ, ಅಸುರಾಂಶಗಳ ಮಿಶ್ರಣವೇ ಮನುಷ್ಯ. ಮನುಷ್ಯನೊಳಗೆ ದೇವತೆಗಳು ಮತ್ತು ರಾಕ್ಷಸರು ಇದ್ದಾರೆ. ಸದ್ಗುಣಗಳೇ ದೇವತೆಗಳು. ಕೆಟ್ಟಗುಣಗಳೇ ರಾಕ್ಷಸರು. ಕೆಟ್ಟಗುಣಗಳನ್ನು ಬಿಡುವುದೇ ರಾಕ್ಷಸ ಸಂಹಾರ. ಸದ್ಗುಣಗಳನ್ನು ದೈವೀಸಂಪತ್ತು ಎನ್ನುವರು. ದೈವೀಸಂಪತ್ತು ಮೋಕ್ಷದಾಯಕ, ದೈವಾಂಶ ಪ್ರಭಾವವು ಪ್ರಗತಿಗೆ ಹೋಗುವಂತೆ ಮಾಡುತ್ತದೆ.

17 ಶ್ರದ್ಧಾತ್ರಯವಿಭಾಗಯೋಗ–ಗುಣತ್ರಯವಿಭಾಗಯೋಗದಂತೆ ಶ್ರದ್ಧಾತ್ರಯವಿಭಾಗಯೋಗ ಸಾಮ್ಯವಾಗಿ ತೋರುತ್ತದೆ. ಆದರೆ ಇಲ್ಲಿ ಮನುಷ್ಯ ತನ್ನ ಶ್ರದ್ಧೆಯನ್ನು ಹೇಗೆ ಬೆಳೆಸಿಕೊಳ್ಳುತ್ತಾನೆ ಎನ್ನುವ ಬಗ್ಗೆ ಇದೆ. ಸ್ವಭಾವದಿಂದ ಹುಟ್ಟಿದ ಜೀವಿಗಳ ಶ್ರದ್ಧೆ ಸಾತ್ತ್ವಿಕ, ರಾಜಸಿಕ ಮತ್ತು ತಾಮಸಿಕ ಎಂಬ ಮೂರು ಬಗೆಯದಾಗಿದೆ. ಮನುಷ್ಯರ ಶ್ರದ್ಧೆ ಅವರವರ ಸ್ವಭಾವಕ್ಕೆ ಅನುಗುಣವಾಗಿರುತ್ತದೆ. ಮನುಷ್ಯ ಶ್ರದ್ಧಾಮಯ. ಯಾರಲ್ಲಿ ಎಂತಹ ಶ್ರದ್ಧೆ ಇದೆಯೋ ಅವನು ಅಂಥವನಾಗುತ್ತಾನೆ.

18 ಮೋಕ್ಷಸಂನ್ಯಾಸಯೋಗ–ಭಗವಂತ ತನ್ನನ್ನು ಕಾಪಾಡುತ್ತಾನೆ ಎಂದು ದೃಢವಾಗಿ ನಂಬಬೇಕು. "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ" – ಭಗವಂತ ಎಲ್ಲರ ಹೃದಯದಲ್ಲೂ ನೆಲೆಸಿದ್ದಾನೆಂದು ತಿಳಿದು ಆತನು ತಿಳಿಸಿದಂತೆ "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎನ್ನುವಂತೆ, ಆತನೊಬ್ಬನಿಗೆ ಶರಣಾಗಿ ಆತನು ಉಪದೇಶಿಸಿದ ಮಾರ್ಗದಂತೆ ನಡೆದರೆ, ಎಲ್ಲಾ ಪಾಪಗಳಿಂದಲೂ ಮುಕ್ತನಾಗಿ, ಮೋಕ್ಷವನ್ನು ಕರುಣಿಸುತ್ತಾನೆ. ಹೀಗೆ ಹೇಳಿದ ಶ್ರೀಕೃಷ್ಣ ಕೇಳುತ್ತಾನೆ–ನಿನ್ನ ಮೋಹ ಕಳೆಯಿತೇ? ಆಗ ಅರ್ಜುನ ಹೇಳುತ್ತಾನೆ–"ಹೌದು ಶ್ರೀಕೃಷ್ಣ, ನನ್ನೆಲ್ಲ ಮೋಹ ಹರಿದುಹೋಯಿತು. ನೀನು ಹೇಳಿದಂತೆ ನಾನೀ ಯುದ್ಧವನ್ನು ಮಾಡುತ್ತೇನೆ." (ಕರಿಷ್ಯೇ ವಚನಂ ತವ)

ಆಗ ಸಂಜಯ ಹೇಳುತ್ತಾನೆ – ಹೀಗೆ ನಾನು ವಾಸುದೇವನ ಮತ್ತು ಮಹಾತ್ಮನಾದ ಅರ್ಜುನನ ಅದ್ಭುತವಾದ ರೋಮಾಂಚಕಾರಿಯಾದ ಈ ಸಂವಾದವನ್ನು ಕೇಳಿದೆನು.

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥

ಎಲ್ಲಿ ಯೋಗೇಶ್ವರನಾದ ಕೃಷ್ಣನಿರುವನೋ, ಎಲ್ಲಿ ಧನುರ್ಧಾರಿಯಾದ ಪಾರ್ಥನಿರುವನೋ ಅಲ್ಲಿ ಶ್ರೀ, ವಿಜಯ, ಐಶ್ವರ್ಯ, ಶಾಶ್ವತವಾದ ನೀತಿ (ಇವುಗಳು) ಇರುವುದೆಂದು ನನ್ನ ಮತ.

ಕಿರಿಯರ ದೃಷ್ಟಿಯಿಂದ ಸೊಗಸಾಗಿ ರಚಿಸಲ್ಪಟ್ಟ ಭಗವಂತನ ನಲ್ನುಡಿಯ ಸಾರಾಂಶ ಎಲ್ಲರ ಮನಸ್ಸನ್ನು ಸೂರೆಗೊಳ್ಳುತ್ತದೆ. ಲೇಖಕರಾದ ಹರಿಕೃಷ್ಣ ರಾವ್ ಎ. ಅವರಿಗೆ ಶುಭಾಶಯಗಳು.

# ಎಂ. ಹರಿದಾಸ್ ರಾವ್ (05.01.1919–29.07.1954)



ಎಂ. ಹರಿದಾಸ ರಾಯರ "ಬಾಳಿನ ಗಿಡ" ಕಾದಂಬರಿಯು 1949ರಲ್ಲಿ ಪ್ರಥಮ ಮುದ್ರಣವಾಗಿ ಆ ನಂತರ 1969 ರವರೆಗೆ 7 ಮುದ್ರಣವಾಗಿತ್ತು. ನಂತರ ನನ್ನ ಎರಡೂವರೆ ವರ್ಷದ ಪ್ರಯತ್ನದಿಂದ ಅವರ ಪುತ್ರರಾದ Lt.Col Dr| ಎಂ ರಮಾಕಾಂತ್ ರಾವ್, ಪುಣೆ ಮತ್ತು ಪ್ರೊ. ಎಂ ಅಶೋಕ್ ಕುಮಾರ್, ಸಿಕಂದರಾಬಾದ್ ಅವರನ್ನು ಸಂಪರ್ಕಿಸಿ ಅವರ ಅನುಮತಿ ಪಡೆದು 50 ವರ್ಷದ ನಂತರ 2019ರಲ್ಲಿ 8ನೇ ಮುದ್ರಣ ಮೂಡಿಬಂತು. ಈ ಮುದ್ರಣವು ಸಾಹಿತ್ಯ ಭಂಡಾರದ ಮಾಲಿಕರಾದ ಎಂ.ಜೆ. ರಾಜರವರ ಸಹಕಾರದಿಂದ ಪ್ರಕಟವಾಯಿತು. "ಬಾಳಿನ ಗಿಡ" ಕಾದಂಬರಿಯನ್ನು 1960ನೇ ದಶಕದಲ್ಲಿ ಮದ್ರಾಸ್ ಮತ್ತು ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಇಂಟರ್ಮೀಡಿಯೇಟ್ ಕ್ಲಾಸುಗಳಿಗೆ ಪಠ್ಯ ಪುಸ್ತಕವಾಗಿ ಅಂದಿನ ಸರಕಾರ ನಮೂದಿಸಿತು. 2019ರಲ್ಲಿ 8ನೇ ಮುದ್ರಣವಾದ ನಂತರದ ಬೆಳವಣಿಗೆಗಳನ್ನು ಈ ಕೆಳಗಿನಂತೆ ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ.

1. ಮಾರ್ಪಳ್ಳಿ ನಾಗಪ್ಪಯ್ಯ ವಂಶಜರ ಧಾರ್ಮಿಕ ಸೇವಾ ಸಮಿತಿಯನ್ನು ಎಂ. ಆರ್. ವಾಸುದೇವರವರ ನೇತೃತ್ವದಲ್ಲಿ ಕುಟುಂಬದವರು ಸೇರಿ 2019ರಲ್ಲಿ ಪುಸ್ತಕ ಬಿಡುಗಡೆಯಾದ ನಂತರ ಸ್ಥಾಪಿಸಿದರು.

2. ಉಜಿರೆಯ ದಿ| ಮಾರ್ಪಳ್ಳಿ ಸುಬ್ಬರಾಯರ ಮಾರ್ಪಳ್ಳಿಯಲ್ಲಿದ್ದ 41 ಸೆಂಟ್ಸ್ ಜಾಗವನ್ನು ಅವರ ಉತ್ತರಾಧಿಕಾರಿಗಳು "ಧಾರ್ಮಿಕ ಸೇವಾ ಸಮಿತಿ"ಗೆ ಉಚಿತವಾಗಿ ದಾನ ಮಾಡಿದರು. ಈ 41 ಸೆಂಟ್ಸ್ ಜಾಗಕ್ಕೆ "ಲಕ್ಷ್ಮೀ ಸುಬ್ರಾಯ ವನ" ಎಂದು ನಾಮಕರಣ ಮಾಡಿದರು.

3. 20.05.2023ರಂದು ಧಾರ್ಮಿಕ ಸೇವಾ ಸಮಿತಿಯವರು ಮತ್ತು ಕುಟುಂಬದವರು ಮೇಲಿನ ಜಾಗದಲ್ಲಿ ನಾಗಬ್ರಹ್ಮಸ್ಥಾನದ ಮತ್ತು ದೈವಗಳ ಪ್ರತಿಷ್ಠಾಪನೆ ಸಮಾರಂಭವನ್ನು ನೆರವೇರಿಸಿದರು.

4. 20.05.2023 ಎಂ. ಹರಿದಾಸ್ ರಾವ್ ಅವರ ಜನ್ಮ ಶತಾಬ್ಧಿ ಸ್ಮರಣಾರ್ಥ ಅಂಚೆ ಇಲಾಖೆ, ಭಾರತ ಸರಕಾರದ ವತಿಯಿಂದ ವಿಶೇಷ ಅಂಚೆ ಲಕೋಟೆ ಬಿಡುಗಡೆ ಕಾರ್ಯಕ್ರಮ ಹೆಡ್‌ಪೋಸ್ಟ್ ಆಫೀಸು, ಉಡುಪಿಯಲ್ಲಿ ನೆರವೇರಿತು.

5. 20.05.2023ರಂದು "ಲಕ್ಷ್ಮೀ ಸುಬ್ರಾಯ ವನ"ದ ಎದುರು ರಸ್ತೆಗೆ "ಮಾರ್ಪಳ್ಳಿ ಹರಿದಾಸ್ ರಾವ್ ಮಾರ್ಗ" ಎಂದು ಹೆಸರಿಸಲಾಯಿತು.

6. 20.05.2023ರಂದು ಡಾ. ಸರ್ವಮಂಗಳ ಪಿ.ಆರ್. ಹುಬ್ಬಳ್ಳಿ ಅವರು ಬರೆದಿರುವ "ಬಾಳಿನ ಗಿಡ" ಖ್ಯಾತಿಯ ಪತ್ರಕರ್ತ–ಸಾಹಿತಿ ಮಾರ್ಪಳ್ಳಿ ಹರಿದಾಸ ರಾವ್ ಕೃತಿಯು ಕಾಂತಾವರ ಕನ್ನಡ ಸಂಘದಿಂದ ಪ್ರಕಟವಾಗಿ ಬಿಡುಗಡೆ ಸಮಾರಂಭ ನೆರವೇರಿತು.

7. ಈ ಮೇಲಿನ ಎಲ್ಲಾ ಕಾರ್ಯಕ್ರಮಗಳಿಗೆ ಎಂ. ಹರಿದಾಸರಾಯರ ಪುತ್ರ ಎಂ. ರಮಾಕಾಂತ ರಾವ್ ಮತ್ತು ಅವರ ಪತ್ನಿ ಸುಭಾಷಿಣಿಯವರು ಪುಣೆಯಿಂದ ಬಂದು ಚಂದಗಾಣಿಸಿದರು.

8. 12.10.2022 ಎಂ. ಹರಿದಾಸ ರಾಯರು ಒಟ್ಟು 20 ಕಾದಂಬರಿ/ಅನುವಾದ/ಪ್ರಬಂಧಗಳನ್ನು ಬರೆದಿದ್ದರು. ಬಾಳಿನ ಗಿಡ ಕಾದಂಬರಿಯಲ್ಲಿ ಇರುವ ಗಜಂತೋಡಿಯಲ್ಲಿ ಈಗ ಎಂ. ಸುದರ್ಶನ್ ರಾವ್ ವಾಸವಿದ್ದು ಅವರ ಮನೆಯಲ್ಲಿ ಹರಿದಾಸರಾಯರು ಬರೆದ ಇನ್ನು 5 ಪುಸ್ತಕಗಳು ಸಿಕ್ಕಿದವು. ಆ ಪುಸ್ತಕಗಳ ಹೆಸರು 1. ಎಚ್ಚತ್ತ ಆಗ್ನೇಯ ಏಷಿಯಾ 2. ದ್ವಿತೀಯ ಮಹಾಯುದ್ಧ 3. ಹುಚ್ಚರ ಮನೆ 4. ಮರುಭೂಮಿ ಅರಬರು ಮತ್ತು 5. ಉಕ್ಕಿನ ಮನುಷ್ಯ.

9. 27.07.2023 ಅವರು ಬರೆದ ಇನ್ನೊಂದು ಕಾದಂಬರಿ "ಹಸಿದ ಹಂಬಲ" ಈ ಪುಸ್ತಕ ನನ್ನ ಆಪ್ತ ಸ್ನೇಹಿತರಾದ ದಿನೇಶ್ ನಾಯಕರು ಅವರ ಒಂದು ಪುಸ್ತಕದ ಕವಾಟಿನಲ್ಲಿ ಸಿಕ್ಕಿತು ಎಂದು ಫೋನ್ ಮಾಡಿ ತಿಳಿಸಿದಾಗ ನನಗೆ ಅತ್ಯಾನಂದವಾಯಿತು. ಹೀಗೆ 20 ಪುಸ್ತಕಗಳಲ್ಲಿ ಈಗ 7 ಪುಸ್ತಕಗಳು ಲಭ್ಯವಾಗಿವೆ.

ಎರಡೂವರೆ ವರ್ಷದ ನನ್ನ ಪ್ರಯತ್ನ ಹಾಗೂ ಹಿತೈಷಿಗಳ ಸಹಕಾರದಿಂದ 50 ವರ್ಷದ ನಂತರ ಬಾಳಿನ ಗಿಡ ಕಾದಂಬರಿ 8ನೇ ಮುದ್ರಣ ಕಂಡಿತು. ಈ ಪ್ರಯತ್ನದಿಂದಾಗಿ ಲೇಖಕರ ಮಕ್ಕಳು ಹಾಗೂ ಕುಟುಂಬದವರ ಸಂಪರ್ಕ ಕಡಿದು ಹೋದದ್ದನ್ನು ಪುನಃ ಜೋಡಿಸುವ ಹಾಗೆ ಆಯಿತು. ಅಲ್ಲದೆ ಮಾರ್ಪಳ್ಳಿ ಕುಟುಂಬದವರು ಧಾರ್ಮಿಕ ಸೇವಾ ಸಮಿತಿಯನ್ನು ಸ್ಥಾಪಿಸಿ ಮಾರ್ಪಳ್ಳಿಯಲ್ಲಿ ಮೇಲೆ ವಿವರಿಸಿದಂತೆ ಉತ್ತಮ ಕಾರ್ಯಕ್ರಮಗಳನ್ನು ಜರಗಿಸಿ ಲೇಖಕರ ಹೆಸರನ್ನು ಅಮರವನ್ನಾಗಿಸಿದ್ದಾರೆ.

ಎಂ. ಹರಿದಾಸ ರಾಯರು ತಮ್ಮ 35 ವರ್ಷದ ಅವಧಿಯಲ್ಲಿ 20 ಉತ್ತಮ ಪುಸ್ತಕಗಳನ್ನು ಬರೆದಿದ್ದರು. ಅವರು ತಮ್ಮ ಪೂರ್ತಿ ಜೀವನ ಬಾಳಿದ್ದರೆ ಕನ್ನಡದ ಶ್ರೇಷ್ಠ ಲೇಖಕರಾಗಿ ಮೆರೆಯುತ್ತಿದ್ದರು. ಅಲ್ಲದೆ ನಮ್ಮ ಸಮಾಜದ ಒಬ್ಬ ಶ್ರೇಷ್ಠ ಲೇಖಕನೆಂದು ನಾವು ಹೆಮ್ಮೆ ಪಡಬಹುದಿತ್ತು. ಇನ್ನೊಂದು ಮುಖ್ಯವಾದ ವಿಷಯ ನಾನು ಇಲ್ಲಿ ತಿಳಿಸಲು ಬಯಸುತ್ತೇನೆ. ಎಂ. ಹರಿದಾಸ ರಾಯರು ಸಣ್ಣ ಪ್ರಾಯದಲ್ಲಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಒಂದು ವರ್ಷ ಕಠಿಣ ಶಿಕ್ಷೆಯನ್ನು ಜೈಲಿನಲ್ಲಿ ಅನುಭವಿಸಿದ್ದರು.

**ಲೇಖಕರ 105ನೇ ಜನ್ಮ ದಿನದ ಸಂದರ್ಭದಲ್ಲಿ ನಾನು ಈ ಸಣ್ಣ ಲೇಖನ ಬರೆದು ಎಂ. ಹರಿದಾಸರಾಯರನ್ನು ಸ್ಮರಿಸುತ್ತಾ ಓದುಗರಿಗೆ ಇತ್ತೀಚಿಗಿನ ಬೆಳವಣಿಗೆಗಳನ್ನು ತಿಳಿಸಲು ಸಂತೋಷ ಪಡುತ್ತೇನೆ.**

**–ಬೈಲಕರೆ ಗೋವಿಂದ ರಾವ್, ಬೆಂಗಳೂರು**
**ಮೊ : 9945695360**

# ಧಾರ್ಮಿಕ ಕೇಂದ್ರಗಳು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿರುವುದು ಶ್ಲಾಘನೀಯ : ಬೊಳ್ಳಾವ ಸತ್ಯಶಂಕರ



ಪೂಜೆ ಪುನಸ್ಕಾರಕ್ಕೆ ದೇವಸ್ಥಾನಗಳು ಸೀಮಿತಗೊಳ್ಳದೆ ಸಾಧಕರನ್ನು ಗುರುತಿಸುವುದು ಸೇರಿದಂತೆ ಹತ್ತು ಹಲವಾರು ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿರುವುದು ನಿಜಾರ್ಥದ ಧರ್ಮವಾಗಿದ್ದು, ಈ ದಿಸೆಯಲ್ಲಿ ಕೂಟ ಬ್ರಾಹ್ಮಣ ಪ್ರವರ್ಗದ ಆಡಳಿತದ ಶ್ರೀ ಗುರು ನರಸಿಂಹ ದೇವಸ್ಥಾನವು ಮಾದರಿಯಾಗಿದೆಯೆಂದು ಮಂಗಳೂರು ಕೋಟೇಕಾರ್ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಸತ್ಯಶಂಕರ ಬೊಳ್ಳಾವ ಅವರು ಕಾರ್ತಿಕ ದೀಪೋತ್ಸವದ ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅಭಿಪ್ರಾಯ ಪಟ್ಟರು. ವಿವಿಧ ಕ್ಷೇತ್ರಗಳ ಸಾಧಕರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸನ್ಮಾನಿತರ ಪರವಾಗಿ ನಿವೃತ್ತ ಯೋಧ ಬೈಂದೂರು ಚಂದ್ರಶೇಖರ ನಾವಡರು ಗುರುಸ್ಮರಣೆ ಮಾಡಿದರು. ವೇದಿಕೆಯಲ್ಲಿ ದೇವಳದ ಅಧ್ಯಕ್ಷ ಡಾ. ಕೆ.ಎಸ್. ಕಾರಂತರು, ದಿ| ಗಂಗಾಧರ ಐತಾಳ ರಚಿತ, ಪತ್ನಿ ಶ್ರೀಮತಿ ಪಾರ್ವತಿ ಐತಾಳರಿಂದ ಸಂಪಾದಿತ ವಿಜ್ಞಾನ, ಗಣಿತ ಮತ್ತು ಖಗೋಳ ಮಾದರಿ ಎಂಬ ಪ್ರೌಢಶಾಲಾ ವಿದ್ಯಾರ್ಥಿಗಳ ಮಾಹಿತಿ ಆಕರ ಕೃತಿಯನ್ನು ಬಿಡುಗಡೆಗೊಳಿಸಿದರು. ಸದಾರಾಮ ಹೇರ್ಳೆ, ಮಣಿಪಾಲ ಕೃತಿ ಮತ್ತು ಕೃತಿಕಾರರ ಕುರಿತು ಮಾತನಾಡಿದರು. ಕೂಟ ಮಹಾ ಜಗತ್ತಿನ ಕೇಂದ್ರ ಸಂಸ್ಥೆಯ ಅಧ್ಯಕ್ಷ ಸತೀಶ ಹಂದೆಯವರು ಉಪಸ್ಥಿತರಿದ್ದರು. ದೇವಳದ ಆಡಳಿತ ಮಂಡಳಿಯ ಸದಸ್ಯ ಪಿ. ಸದಾಶಿವ ಐತಾಳರು ಸ್ವಾಗತಿಸಿದರು. ಮೀಯಪದವು ಎಂ. ಆರ್. ಶ್ರೀಧರ ರಾಯರು ಅತಿಥಿಗಳನ್ನು ಗೌರವಿಸಿದರು. ಎ.ವಿ. ಶ್ರೀಧರ ಕಾರಂತರು ಧನ್ಯವಾದ ಸಮರ್ಪಣೆ ಮಾಡಿದ ಸಭಾ ಕಾರ್ಯಕ್ರಮವನ್ನು ಸುಜಾತ ಬಾಯರಿ ಮತ್ತು ಜ್ಯೋತಿ ನಿರೂಪಿಸಿದರು. ನಿಗಮಾಗಮ ವೇದ ಪಾಠಶಾಲೆಯ ವಿದ್ಯಾರ್ಥಿಗಳ ವೇದಘೋಷದಿಂದ ಪ್ರಾರಂಭವಾದ ಅಚ್ಚುಕಟ್ಟಾದ ಸಮಾರಂಭವು ಐಕ್ಯ ಮಂತ್ರದೊಂದಿಗೆ ವಿಧ್ಯುಕ್ತವಾಗಿ ಮುಕ್ತಾಯಗೊಂಡಿತು.

# ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಕೊಡುಗೆ

ಸ್ಥಾನಿಕ ಸಮಾಜದ ಭಕ್ತರೊಬ್ಬರಿಂದ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಎರಡು ಡಬಲ್ ಗ್ಯಾಸ್ ಸ್ಟವ್‌ಗಳು, ಎರಡು ದೊಡ್ಡ ಸ್ಟೀಲ್ ಬಾಲ್ದಿಗಳು, ಸುಮಾರು 50ಕ್ಕೂ ಮಿಕ್ಕಿ ಸ್ಟೀಲ್ ಲೋಟಗಳು, 20 ಸ್ಟೀಲಿನ ಬಟ್ಟಲುಗಳು, 7 ಅಲ್ಯೂಮಿನಿಯಂ ಪಾತ್ರೆಗಳು ಮತ್ತು ಒಂದು ಸಣ್ಣ ಹೋಳಿಗೆ ಹಂಚು ಇವುಗಳನ್ನು ಆಡಳಿತ ಮಂಡಳಿಯ ಸಮ್ಮುಖದಲ್ಲಿ ದೇವಳಕ್ಕೆ ಒಪ್ಪಿಸಲಾಯಿತು.

ಬೆಂಗಳೂರಿನಲ್ಲಿ ವಾಸವಾಗಿರುವ ಶ್ರೀಮತಿ ಅರ್ಚನಾ ಮತ್ತು ಸಚಿನ್ ಅನಾರ್ ದಂಪತಿಗಳು ಸುಮಾರು ರೂ.10,000/– ಮೌಲ್ಯದ ಡಬಲ್ ಗ್ಯಾಸ್‌ಸ್ಟವ್ ಅನ್ನು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಉಪಯೋಗಕ್ಕಾಗಿ ಕೊಟ್ಟಿರುತ್ತಾರೆ. ಇದನ್ನು ಅರ್ಚನಾಳ ತಂದೆ ಪಾದೆಬೆಟ್ಟು ದೇವರಾಯ ಶರ್ಮ ಇವರು ಆಡಳಿತ ಮಂಡಳಿಯ ಸಮ್ಮುಖದಲ್ಲಿ ದೇವರಿಗೆ ಸಮರ್ಪಿಸಿದರು.

ಸಮಾಜದ ಅಭಿವೃದ್ಧಿಗೆ ಯಾವಾಗಲು ಶ್ರಮಿಸುತ್ತಿರುವ ಹಾಗೂ ಸ್ವ–ಉದ್ಯೋಗದ ಬಗ್ಗೆ ಎಲ್ಲರನ್ನು ಪ್ರೇರೇಪಿಸುತ್ತಿರುವ ಎಲ್ಲೂರಿನ ಶ್ರೀಮತಿ ಶರಾವತಿ ರವಿರಾಜ್ ರಾವ್ ಇವರು ಸುಮಾರು ರೂ.27,000/– ಮೌಲ್ಯದ 5 ಸ್ಟೀಲ್ ಟೇಬಲ್‌ಗಳನ್ನು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಉಪಯೋಗಕ್ಕಾಗಿ ಆಡಳಿತ ಮಂಡಳಿಯ ಉಪಸ್ಥಿತಿಯಲ್ಲಿ ದೇವಳಕ್ಕೆ ಸಮರ್ಪಿಸಿದರು.

## ಪ್ರಕಟಣೆ

**ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್ ಇದರ ಯುವ ವೇದಿಕೆಯ ವತಿಯಿಂದ, ಸ್ಥಾನಿಕ ಬ್ರಾಹ್ಮಣ ಸಮಾಜದ ಯುವಕರಿಗೆ 10ನೇ ವರ್ಷದ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟ ಮತ್ತು ಮಹಿಳೆಯರಿಗೆ ಥ್ರೋ ಬಾಲ್ ಪಂದ್ಯಾಟ, ಪಣಂಬೂರು NMPT ಮೈದಾನದಲ್ಲಿ ದಿನಾಂಕ 28.01.2024ನೇ ಆದಿತ್ಯವಾರದಂದು ನಡೆಯಲಿದೆ. ಈ ಪಂದ್ಯಾಟದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇವೆ.**

**ಪಂದ್ಯಾಟದಲ್ಲಿ ಭಾಗವಹಿಸಲು ಇಚ್ಛಿಸುವ ತಂಡಗಳು ದಿನಾಂಕ 07.01.2024ರ ಮೊದಲು ತಮ್ಮ ಹೆಸರನ್ನು ಪ್ರವೀಣ್ – (9448953331), ಸಂದೀಪ್–(9844630306) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.**

**–ಅಧ್ಯಕ್ಷರು ಮತ್ತು ಸದಸ್ಯರು, ಯುವವೇದಿಕೆ,**
**ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್.**


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಶ್ರೀ ಶಾರದಾ ಕ್ರಿಕೆಟ್ ಟ್ರೋಫಿ : ಮತ್ತೆ ನಂದಳಿಕೆ ತಂಡಕ್ಕೆ

■...1ನೇ ಪುಟದಿಂದ

ಶಶಿಕಿರಣ್ ತ್ರಿಶಾ ವಿದ್ಯಾಕಾಲೇಜು ಕಟಪಾಡಿ ಶಿವಚರಣ್ ಮಣಿಪಾಲ, ಸಾತ್ವಿಕ್ ಮಣಿಪಾಲ, ರಂಜಿತ್ ಶೆಟ್ಟಿ ಉಡುಪಿ, ಚರಣ್‌ಶೆಟ್ಟಿ ಉಡುಪಿ ಪಾಲುಗೊಂಡಿದ್ದು, ಸ್ವರೂಪ್ ಉಡುಪಿ ಮತ್ತು ವಿಶ್ವಜಿತ್ ಹಿರಿಯಡ್ಕ ಕೂಡಾ ಸಹಕರಿಸಿ ಪಂದ್ಯಾಟವನ್ನು ಯಾವುದೇ ವಿವಾದ ಇಲ್ಲದೆ ಮುಕ್ತಾಯಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಸುದರ್ಶನ್ ರಾವ್ ಕಾಪು, ವಸಂತ್ ರಾವ್ ಕರಂಬಳ್ಳಿ, ಸತೀಶ್ ರಾವ್, ಪ್ರತೀಕ್ ರಾವ್ ಉಡುಪಿ, ಉಮೇಶ್ ರಾವ್, ಪ್ರಕಾಶ್ ಕೋಲ್ಪೆ, ಮೊದಲಾದವರು ಈ ಎಲ್ಲಾ ಪಂದ್ಯಗಳ ಸ್ಕೋರರ್‌ಗಳಾಗಿ ಸಹಕರಿಸಿದರು.

ಹಾಗೆಯೇ ಪ್ರಭಾಕರ ಭಂಡಿ, ವಿಶ್ವನಾಥ ಶ್ಯಾನುಭಾಗ್, ವಿನೋದ್ ಕುಮಾರ್ ಮೊದಲಾದವರು ಎಲ್ಲಾ ಪಂದ್ಯಗಳು ಸಾಂಗವಾಗಿ ನಡೆಯುವಂತೆ ಸಹಕರಿಸಿದರು.

**ಸಮಾರೋಪ ಮತ್ತು ಬಹುಮಾನ ವಿತರಣೆ :** ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಕೋದಂಡರಾಮ ದೈಹಿಕ ಶಿಕ್ಷಣ ನಿರ್ದೇಶಕರು ಕಾರ್ಕಳ, ಕೇಶವ ರಾವ್ ಉಡುಪಿ ಜಿಲ್ಲಾ ಬ್ರಾಹ್ಮಣ ಸಂಘದ ಕೋಶಾಧಿಕಾರಿ, ಬಹುಮಾನದ ಪ್ರಾಯೋಜಕರಾದ ಜಯರಾಮರಾವ್ ಉಡುಪಿ, ಗೋವಾದ ಎಮ್.ಎಸ್. ಕಾಲೇಜಿನ ಪ್ರಯೋಗಾಲಯದ ಟೆಕ್ನಿಶಿಯನ್ ಆಗಿದ್ದು ನಿವೃತ್ತರಾಗಿರುವ ರಮೇಶ್‌ರಾವ್ ಪಾಂಡೇಶ್ವರ, ನಮ್ಮ ಸಮಾಜದ ಸಿವಿಲ್ ಇಂಜಿನಿಯರ್ ವಿಜಯಚಂದ್ರ ರಾವ್ ಉದ್ಯಾವರ, ಯುವ ವೇದಿಕೆಯ ಅಧ್ಯಕ್ಷ ಸಂತೋಷ್ ರಾವ್ ಚಿಟ್ಪಾಡಿ, ಕೋಶಾಧಿಕಾರಿ ಗಣೇಶ್ ಹೆಬ್ಬಾರ್, ಮೊದಲಾದವರ ಉಪಸ್ಥಿತಿಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಮಂಜುನಾಥ ಹೆಬ್ಬಾರ್ ಎಲ್ಲರನ್ನು ಸ್ವಾಗತಿಸಿದರು. ಪ್ರಭಾಕರ ಭಂಡಿ ವಂದನಾರ್ಪಣೆ ಮಾಡಿದರು. ಕೃಷ್ಣಕುಮಾರ್‌ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆ ಮಾಡಿದ್ದರು.

**ಅಚ್ಚುಕಟ್ಟಾದ ವ್ಯವಸ್ಥೆ :** ಬೆಳಿಗ್ಗೆ 7.30ಕ್ಕೆ ಸರಿಯಾಗಿ ತಂಡಗಳು ಎಂ.ಜಿ.ಎಂ. ಕ್ರೀಡಾಂಗಣಕ್ಕೆ ಆಗಮಿಸುವಾಗಲೇ ಬೆಳಗ್ಗಿನ ಉಪಾಹಾರಕ್ಕಾಗಿ ಶಾವಿಗೆಬಾತ್ ಶೀರ, ಬಿಸಿ ಬಿಸಿ ದೋಸೆಯೊಂದಿಗೆ ಚಹಾ-ಕಾಫಿ ಸಿದ್ಧಗೊಂಡಿತ್ತು. ಆಗಮಿಸಿದ ತಂಡಗಳ ಸದಸ್ಯರು ಬಹಳ ಸಂತೋಷದಿಂದ ಬೆಳಗ್ಗಿನ ಉಪಾಹಾರವನ್ನು ಮೈದಾನದಲ್ಲಿ ಪೂರೈಸಿದರು. ನಂತರ ಕುಡಿಯುವ ನೀರಿನ ವ್ಯವಸ್ಥೆಯೊಂದಿಗೆ, ಬಗೆಬಗೆಯ ತಂಪು ಪಾನೀಯಗಳೂ ಮೈದಾನದಲ್ಲಿಯೇ ಲಭ್ಯವಿತ್ತು. ಪಂದ್ಯಗಳ ನಡುವೆ ತಂಪು ಪಾನೀಯದ ಬರಾಟೆ ಜೋರಾಗಿಯೇ ನಡೆದಿತ್ತು. ಮಧ್ಯಾಹ್ನದ ಊಟಕ್ಕಾಗಿ ಮಾತ್ರ ಎಲ್ಲರೂ ಶ್ರೀ ಶಾರದಾ ಮಂಟಪಕ್ಕೆ ಹೋಗಬೇಕಾದ ಅನಿವಾರ್ಯತೆ ಇತ್ತು. ಅಂತೆಯೇ ಮಧ್ಯಾಹ್ನ 1.00 ಗಂಟೆಗೆ ಆಟದಲ್ಲಿಲ್ಲದ ಆಟಗಾರರು, ಬಂಧುಗಳು ಶ್ರೀ ಶಾರದಾ ಮಂಟಪದಲ್ಲಿ ಮಧ್ಯಾಹ್ನದ ಭೋಜನ ಸ್ವೀಕರಿಸಿದರು, ಅನ್ನ, ಸಾರು, ಹುಳಿಯೊಂದಿಗೆ ಚಪಾತಿ, ಸಿಹಿಭಕ್ಷಗಳು ಮತ್ತು ಪಾಯಸ, ಮಜ್ಜಿಗೆ ಮೊದಲಾದ ಖಾದ್ಯಗಳನ್ನು ಸೇವಿಸಿ ಮತ್ತೆ ಆಟಕ್ಕೆ ಸಿದ್ಧರಾದರು. ಸಂಜೆ 3.30ಕ್ಕೆ ಟೀಗಾಗಿ ವಡೆ ಮತ್ತು ಚಹಾ-ಕಾಫಿ ಮೈದಾನದಲ್ಲಿ ಸಿದ್ಧಗೊಂಡಿತ್ತು.

**ಶ್ರೀ ಶಾರದಾ ಟ್ರೋಫಿ 2023ಕ್ಕೆ ಆಗಮಿಸಿರುವ ತಂಡಗಳು :**

1. ರಾವ್ ಬ್ರದರ್ಸ್ ಕಟಪಾಡಿ (ಎ)
2. ಮಾಸ್ಕಿಕ್ಲಬ್ ಬಾರ್ಕೂರು
3. ಎಸ್.ಬಿ.ಎಸ್. ಸುರತ್ಕಲ್ (ಬಿ)
4. ಎಫ್.ಡಬ್ಲ್ಯೂ.ಎಫ್ ಬೆಂಗಳೂರು.
5. ಸ್ಥಾನಿಕ ರೋಯಲ್ಸ್ ಬೆಳ್ತಂಗಡಿ
6. ಸ್ಥಾನಿಕ ಫ್ರೆಂಡ್ಸ್ ಸುಳ್ಯ.
7. ಶ್ರೀ ದುರ್ಗಾ ಕ್ರಿಕೆಟರ್ಸ್ ಮಂದಾರ್ತಿ
8. ಪಂಚಶ್ರೀ ವಿಟ್ಲ
9. ಹೆಬ್ಬಾರ್ಸ್ ಕಬ್ಬಿನಾಲೆ (ಎ)
10. ಶ್ರೀ ಶಾರದಾ ಕ್ರಿಕೆಟರ್ಸ್ ಉಡುಪಿ (ಬಿ)
11. ಶ್ರೀ ಸ್ಥಾನಿಕ ಪ್ರತಿಷ್ಠಾನ ಕ್ರಿಕೆಟರ್ಸ್ ಕಾರ್ಕಳ
12. ಶ್ರೀ ಶಾರದಾ ಕ್ರಿಕೆಟರ್ಸ್ ಉಡುಪಿ (ಎ)
13. ಎಸ್.ಬಿ.ಎಸ್. ಸುರತ್ಕಲ್ (ಎ)
14. ಹೆಬ್ಬಾರ್ಸ್ ಕಬ್ಬಿನಾಲೆ (ಬಿ)
15. ಸ್ಥಾನಿಕ ವಾರಿಯರ್ಸ್ ಬೆಳ್ತಂಗಡಿ.
16. ಕುಂದಾಪುರ ಸ್ಟ್ರೈಕರ್ಸ್
17. ಸ್ಥಾನಿಕ ಫೆಂಡ್ಸ್ ವಿಟ್ಲ.
18. ರಾವ್ ಬ್ರದರ್ಸ್ ಕಟಪಾಡಿ (ಬಿ)
19. ಸ್ಥಾನಿಕ ಬ್ರಾಹ್ಮಣ ಸಂಘ ಪಡುಬಿದ್ರೆ.
20. ಯುನೈಟೆಡ್ ಬ್ರದರ್ಸ್ ಕುದಾಪುರ
21. ನಂದಳಿಕೆ.

**ಕ್ರಿಕೆಟ್ ಫಲಿತಾಂಶ ವಿವರ :**

**ವಿನ್ನರ್ಸ್** - ರಾವ್ ಬ್ರದರ್ಸ್ ಕಟಪಾಡಿ, **ರನ್ನರ್ಸ್** - ಕುಂದಾಪುರ ಸ್ಟ್ರೈಕರ್ಸ್, **ಸೆಮಿಫೈನಲ್ ಲೂಸರ್ಸ್** 1. ಶ್ರೀ ದುರ್ಗಾ ಕ್ರಿಕೆಟರ್ಸ್ ಮಂದಾರ್ತಿ, 2. ನಂದಳಿಕೆ ತಂಡ, **ಬೆಸ್ಟ್ ಬ್ಯಾಟ್ಸ್‌ಮನ್**- ಕಾರ್ತಿಕ್ (ರಾವ್ ಬ್ರದರ್ಸ್ ಕಟಪಾಡಿ.), **ಬೆಸ್ಟ್ ಬೌಲರ್** - ಕೋದಂಡರಾಮ (ಶ್ರೀ ದುರ್ಗಾ ಮಂದಾರ್ತಿ), **ಬೆಸ್ಟ್ ಆಲ್‌ರೌಂಡರ್** - ಆದರ್ಶ (ರಾವ್ ಬ್ರದರ್ಸ್ ಕಟಪಾಡಿ)

**ತ್ರೋಬಾಲ್ ಪಂದ್ಯಾಟ :** ತ್ರೋಬಾಲ್ ಪಂದ್ಯಕ್ಕೆ 9 ತಂಡಗಳು ಹೆಸರು ನೋಂದಾಯಿಸಿದ್ದು, ಮಧ್ಯಾಹ್ನ ಊಟದ ನಂತರ ಆಟ ಪ್ರಾರಂಭಗೊಂಡಿತು. ಮಧ್ಯಾಹ್ನ 3.30 ರವರೆಗೆ ಸಾಗಿದ ಆಟಗಳಲ್ಲಿ ತಂಡಗಳು ಪರಸ್ಪರ ಹೋರಾಟವಾಡಿ ಕೊನೆಯಲ್ಲಿ ಶ್ರೀ ದುರ್ಗಾ ಮಂದಾರ್ತಿ ತಂಡವು ಶ್ರೀ ಶಾರದಾ ಟೀಮ್ ಉಡುಪಿಯನ್ನು ಸೋಲಿಸಿ ತ್ರೋಬಾಲ್‌ನಲ್ಲಿ ವಿಜೇತ ತಂಡವಾಗಿ ಮೂಡಿಬಂತು. ಶ್ರೀಮತಿ ಜಯಭಾರತಿ ದೈಹಿಕ ಶಿಕ್ಷಣ ನಿರ್ದೇಶಕರು ಸರಕಾರಿ ಪ್ರಥಮ ದರ್ಜೆ ಕಾಲೇಜು ಕಾರ್ಕಳ, ಕೋದಂಡರಾಮ ಮಂದಾರ್ತಿ ದೈಹಿಕ ಶಿಕ್ಷಣ ನಿರ್ದೇಶಕರು ಸರಕಾರಿ ಪ್ರೌಢ ಶಾಲೆ ನಾರಾವಿ, ಶ್ರೀಮತಿ ವಿಂದ್ಯಾರಾವ್ ದೈಹಿಕಶಿಕ್ಷಣ ನಿರ್ದೇಶಕರು ಶಾಂತಿ ನಿಕೇತನ ಪ್ರೌಢ ಶಾಲೆ ಅಲೆವೂರು. ಭರತ್ ಕುಕ್ಕಿಕಟ್ಟೆ, ಮೊದಲಾದವರು ತ್ರೋಬಾಲ್ ಪಂದ್ಯಗಳಿಗೆ ತೀರ್ಪುಗಾರರಾಗಿ ಸಹಕರಿಸಿದರು.

**ತ್ರೋಬಾಲ್ ಫಲಿತಾಂಶ ವಿವರ :**

**ವಿನ್ನರ್ಸ್**- ಶ್ರೀ ದುರ್ಗಾ ಮಂದಾರ್ತಿ, **ರನ್ನರ್ಸ್**- ಶ್ರೀ ಶಾರದಾ ಟೀಮ್ ಉಡುಪಿ, **ಬೆಸ್ಟ್ ಪ್ಲೇಯರ್**- 1. ವೀಣಾ ಕೊಕ್ಕರ್ಣೆ (ಶ್ರೀ ದುರ್ಗಾ ಮಂದಾರ್ತಿ), 2. ವೈಷ್ಣವಿ (ಶ್ರೀ ಶಾರದಾ ಟೀಮ್ ಉಡುಪಿ)

**ಕೃತಜ್ಞತಾರ್ಪಣೆ :** ಶ್ರೀ ಶಾರದಾ ಟ್ರೋಫಿ-2023 ಕ್ರಿಕೆಟ್ ಪಂದ್ಯಾಟವು ಯಶಸ್ವಿಯಾಗಿ ನಡೆದಿದೆ ಎನ್ನಲು ಸಂತೋಷಪಡುತ್ತೇವೆ. ಈ ಪಂದ್ಯಾಟಕ್ಕಾಗಿ ಸಂಘಟಕರಿಗೆ ಹಲವು ದಿನಗಳ ಶ್ರಮವೂ ಇದೆ. ಆದರೂ ಇವೆಲ್ಲ ಕಾರ್ಯಗಳು ಯಶಸ್ವಿಯಾಗಿ ನೆರವೇರಲು ಕಾರಣರಾದವರನ್ನು ಸ್ಮರಿಸಬೇಕಾದುದು ನಮ್ಮ ಕರ್ತವ್ಯ. ಹಾಗೆಯೇ ಈ ಪಂದ್ಯಾವಳಿಗೆ ದೂರದ ಊರುಗಳಿಂದ ಮಾತ್ರವಲ್ಲ, ನಮ್ಮ ಆಸುಪಾಸಿನ ಊರುಗಳಿಂದಲೂ ಆಗಮಿಸಿದ ಎಲ್ಲಾ ತಂಡಗಳಿಗೆ, ಅಲ್ಲಿಂದ ಆಗಮಿಸಿರುವ ಸಂಘಗಳ ಪದಾಧಿಕಾರಿಗಳಿಗೆ, ನಾವು ಕರೆದಂತೆ ಆಗಮಿಸಿರುವ ಅಂದಿನ ಅತಿಥಿಗಳಿಗೆ, ಪಂದ್ಯಗಳನ್ನು ಸಾಂಗವಾಗಿ ನೆರವೇರಿಸಿಕೊಟ್ಟ ತೀರ್ಪುಗಾರರಿಗೆ, ಸ್ಕೋರರ್‌ಗಳಾಗಿ ಸಹಕರಿಸಿದ ನಮ್ಮ ಸಮಾಜ ಬಾಂಧವರಿಗೆ, ಪಂದ್ಯವನ್ನು ನಡೆಸಿಕೊಟ್ಟ ಎಲ್ಲಾ ಉಸ್ತುವಾರಿಗಳಿಗೆ, ಪಂದ್ಯಾವಳಿಗೆ ಬಹುಮಾನ ಮತ್ತು ಟ್ರೋಫಿಯನ್ನು ಒದಗಿಸಿದ ದಾನಿಗಳಿಗೆ, ಬೇರೆ ಬೇರೆ ರೀತಿಯ ವಸ್ತುರೂಪದ ದಾನಿಗಳಿಗೆ, ಧನಸಹಾಯವಿತ್ತು ಸಹಕರಿಸಿದ ಮಹನೀಯರಿಗೆ ಮತ್ತು ಸಂಘ ಸಂಸ್ಥೆಗಳಿಗೆ, ಶ್ರೀ ಶಾರದಾ ಮಂಟಪದ ಮೆನೇಜರ್ ಮತ್ತು ಸಿಬ್ಬಂದಿ ವರ್ಗಕ್ಕೆ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿಗಳಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

### ಕಾರ್ಯಕ್ರಮಗಳ ಪ್ರಾಯೋಜಕರು

**ಕ್ರಿಕೆಟ್ :**

1. ಪ್ರಥಮ ಬಹುಮಾನ-**ಅಲೆವೂರು ಶ್ಯಾಮರಾವ್**
   (ತಮ್ಮ ಮಾತಾಪಿತರಾದ ದಿ। ಶಾಂತಾ ಹಾಗೂ ದಿ। ಭುಜಂಗರಾವ್ ಸ್ಮರಣಾರ್ಥ)
2. ದ್ವಿತೀಯ ಬಹುಮಾನ-**ಶ್ರೀಮತಿ ಸುನಂದ ಹಾಗೂ ಸಿ.ಎಸ್. ರಾವ್ ಚಿಟ್ಪಾಡಿ.**
3. ಸಮಾಧಾನಕರ ಬಹುಮಾನ-**ವೈ. ಭುವನೇಂದ್ರ ರಾವ್**
   (ತಮ್ಮ ಮಾತಾಪಿತರಾದ ದಿ। ಗಿರಿಜಮ್ಮ ಹಾಗೂ ದಿ। ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಸ್ಮರಣಾರ್ಥ)
4. ಉತ್ತಮ ಬೌಲರ್, ಬ್ಯಾಟ್ಸ್‌ಮನ್, ಆಲ್‌ರೌಂಡರ್ ಪುರಸ್ಕಾರ-**ಬಿ.ಜಯರಾಮ ರಾವ್ ಉಡುಪಿ**
5. ಎಲ್ಲಾ ಟ್ರೋಫಿಗಳು - **ಯು. ವಿಜಯಚಂದ್ರ ರಾವ್ ಉಡುಪಿ ಮತ್ತು ಪ್ರತೀಕ್ ರಾವ್, ಉಡುಪಿ** (ದಿ। ಪ್ರಫುಲ್ಲ ಚಂದ್ರ ರಾವ್ ಸ್ಮರಣಾರ್ಥ)

**ತ್ರೋಬಾಲ್ :**

6. ಪ್ರಥಮ, ದ್ವಿತೀಯ, ತೃತೀಯ ಬಹುಮಾನ-**ಶ್ರೀಮತಿ ಸುಕನ್ಯಾ ಮತ್ತು ಶ್ರೀ ಸತೀಶ್ ರಾವ್, ಚಿಟ್ಪಾಡಿ.**
7. ಬೆಳಗ್ಗಿನ ಉಪಾಹಾರ-**ಮಧುಚಂದ್ರ ಕೊಠಾರಿ, ಪೆರ್ಡೂರು**
8. ತಂಪು ಪಾನೀಯ ವ್ಯವಸ್ಥೆ-**ಅಜಿತ್ ರಾವ್ ಮೆನೇಜರ್, ಶ್ರೀ ಶಾರದಾ ಮಂಟಪ**
9 ಊಟಕ್ಕೆ ಜಿಲೇಬಿ ಸಿಹಿ-**ಬಿ.ಜಯರಾಮ ರಾವ್**
10. ಪದಕಗಳ ಪ್ರಾಯೋಜಕರು - **ವಸಂತಕುಮಾರ್, ಉಚ್ಚಿಲ**
11. **ಕರ್ನಾಟಕ ಬ್ಯಾಂಕ್ ಲಿ. ಕುಂಜಿಬೆಟ್ಟು, ಉಡುಪಿ**
12. **ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಉಡುಪಿ.**

**ಅನೇಕ ಮಹನೀಯರು ಧನಸಹಾಯ ನೀಡಿ ಪ್ರೋತ್ಸಾಹಿಸಿದ್ದಾರೆ. ಇವರೆಲ್ಲರಿಗೆ ಧನ್ಯವಾದಗಳು.**

## ಮಹಿಳಾವೇದಿಕೆಯಿಂದ ಒಳಾಂಗಣ ಕ್ರೀಡೆಗಳು

■...1ನೇ ಪುಟದಿಂದ



'ಹಿಂದೆ ಕಪ್ಪೆ ಜಿಗಿತ', 4-7ನೇ ತರಗತಿಯ ಮಕ್ಕಳಿಗೆ ರಟ್ಟಿನ ರೇಸ್ ನಡೆಯಿತು.

ಹೈಸ್ಕೂಲ್ ಮಕ್ಕಳಿಗೆ ಗ್ಲಾಸ್‌ಕಾರ್ಡ್ ಗೋಪುರ ನಿರ್ಮಾಣ, 60 ವರ್ಷದೊಳಗಿನ ಮಹಿಳೆಯರಿಗೆ ಮ್ಯೂಸಿಕಲ್ ಚೇರ್, 60 ವರ್ಷ ಮೇಲ್ಪಟ್ಟವರಿಗೆ "ಸ್ಮರಣಾ ಶಕ್ತಿ ಸ್ಪರ್ಧೆ"ಗಳನ್ನು ಏರ್ಪಡಿಸಲಾಗಿತ್ತು. ಸುಮಾರು 150 ಸದಸ್ಯರು ಕ್ರೀಡೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಮಧ್ಯಾಹ್ನ 12.30ಕ್ಕೆ ಕ್ರೀಡೆಗಳು ಮುಗಿದು, ಸದಸ್ಯರು ಭೋಜನವನ್ನು ಸವಿದರು. ನಂತರ 1.30ಕ್ಕೆ ನಡೆದ ಚಿಕ್ಕ-ಚೊಕ್ಕ ಸಭಾ ಕಾರ್ಯಕ್ರಮವು ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ ಉಡುಪಿ ಇದರ ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿ ಶ್ರೀಮತಿ ಜಯಲಕ್ಷ್ಮಿಯವರು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾದರೆ ಸಮಾಜವು ಮುನ್ನಡೆಯಲು ಸಾಧ್ಯ ಎಂದು ಕಿವಿ ಮಾತು ಹೇಳಿದರು. ಅಧ್ಯಕ್ಷರು ಕ್ರೀಡೆಯಲ್ಲಿ ವಿಜೇತರಾದವರನ್ನು ಅಭಿನಂದಿಸಿ ನಮ್ಮ ಉಡುಪಿ ಸಂಘವು ಆರಂಭಿಸಿದ ಸ್ಥಾನಿಕರ ಮಹಿಳಾ ಥ್ರೋಬಾಲ್ ಪಂದ್ಯವು ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುತ್ತಿದ್ದು, ಈ ಬಾರಿ 11 ತಂಡಗಳು ನೋಂದಣಿ ಮಾಡಿಕೊಂಡಿವೆ. ಇದು ನಮಗೆ ಹೆಮ್ಮೆಯು ಹಾಗೂ ಸಂತೋಷದ ವಿಚಾರ ಎಂದರು. ವಿಜೇತರಿಗೆ ಬಹುಮಾನ ವಿತರಣೆಗಳಾದವು. ಸಂಘದ ಕೋಶಾಧಿಕಾರಿ ಗಣೇಶ್ ಹೆಬ್ಬಾರ್, ಮಹಿಳಾ ವೇದಿಕೆಯ ಅಧ್ಯಕ್ಷೆ ಡಾ। ವಿಜಯ ವೈ.ಬಿ., ವೇದಿಕೆಯಲ್ಲಿ ಉಪಸ್ಥಿತರಿದ್ದರು. ಡಾ। ವಿಜಯ ವೈ.ಬಿ., ಪ್ರೀತಿ ಸಂತೋಷ್ ರಾವ್, ಜ್ಯೋತಿ ಸಂತೋಷ್‌ರಾವ್, ಪಾವನರಾವ್ ಹಾಗೂ ಪವಿತ್ರರಾವ್ ಅವರು ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಿಕೊಟ್ಟರು.




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

# ಗುರು ಲಘುವಾಗಬಾರದು ಅಲ್ಲವೇ...

– ರಶ್ಮಿ ಉಳಿಯಾರು, ಬೆಂಗಳೂರು

ಅನೇಕ ವಿಷಯಗಳಲ್ಲಿ "ನಮ್ಮ ಕಾಲವೇ ಚಂದವಪ್ಪಾ, ನಮ್ಮ ಕಾಲದಲ್ಲಿ ಹೀಗಿರಲಿಲ್ಲ" ಅಂತ ಹಿರಿಯರು ಹೇಳುವುದನ್ನು ನಾವು ನೀವೆಲ್ಲ ಕೇಳಿರುತ್ತೇವೆ. ಅದರಲ್ಲೂ ಶಿಕ್ಷಣ ವ್ಯವಸ್ಥೆಯ ವಿಷಯ ಬಂದಾಗ ಬಹಳಷ್ಟು ಬದಲಾವಣೆಗಳು ಎದ್ದು ಕಾಣುತ್ತವೆ.

ಬಹಳ ಹಿಂದೆ ಬೇಡ, ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದಿನ ಸಮಯದಲ್ಲಿನ ಶಾಲಾ ಶಿಕ್ಷಣ ವ್ಯವಸ್ಥೆ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವಣ ಸಂಬಂಧ ಹೇಗಿತ್ತು ನೆನಪಿಸಿಕೊಳ್ಳಿ. ಆಗ ಮಕ್ಕಳಿಗೆ ವಿದ್ಯೆ, ಬುದ್ಧಿ, ಒಳ್ಳೆಯ ಸಂಸ್ಕಾರಗಳನ್ನು ಕೊಡುವ ದೇವಾಲಯವೆಂದೇ ವಿದ್ಯಾಲಯಗಳು ಪರಿಗಣಿತವಾಗಿದ್ದವು. ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ದಾರಿಯಲ್ಲಿ ಸಾಗುವಂತೆ ಮಾಡಲು ಶಿಕ್ಷಕರಿಗೆ ಎಲ್ಲ ಬಗೆಯ ಅಧಿಕಾರವನ್ನು ನೀಡುತ್ತಿದ್ದರು. ಅಂದರೆ ಮಕ್ಕಳಿಗೆ ಶಾಲೆಯಲ್ಲಿ ಹೊಡೆಯುವುದು, ಶಿಕ್ಷಿಸುವುದು ಆಗ ಯಾರಿಗೂ ತಪ್ಪೆನ್ನಿಸುತ್ತಿರಲಿಲ್ಲ. ಅದು ಸಹಜ ವಿಷಯವಾಗಿತ್ತು. ಸ್ವತಃ 'ಪಾಲಕರೇ ಹೇಳಿದ ಒಂದು ಮಾತೂ ಕೇಳುವುದಿಲ್ಲ, ಮನೆಯಲ್ಲಿ ಪುಸ್ತಕ ಹಿಡಿಯುವುದಿಲ್ಲ, ಟೀಚರ್/ಸರ್... ಸರೀ ಎರಡು ಬಿಡಿ...' ಎಂದು ಅಹವಾಲು ಸಲ್ಲಿಸುತ್ತಿದ್ದರು. ಮನೆಗಳಲ್ಲೂ ಮಕ್ಕಳಿಗೆ ಶಿಸ್ತು ಕಲಿಸುವುದು ಸಾಮಾನ್ಯವಾಗಿ ರೂಢಿಗತವಾಗಿ ಬಂದು 'ಶಿಕ್ಷೆಯಿಂದ ಶಿಕ್ಷಣ' ಎನ್ನುವ ಪರಿಕಲ್ಪನೆ ಇದ್ದಿತ್ತು. ಶಿಕ್ಷಕರು ಮತ್ತು ಮಕ್ಕಳು ಹೆಚ್ಚಾಗಿ ಒಂದೇ ಊರಿನವರಾದ ಕಾರಣ, ಶಿಕ್ಷಕರಿಗೆ ಪ್ರತೀ ಮಗುವಿನೊಂದಿಗೆ ವೈಯಕ್ತಿಕ ಸ್ಪರ್ಶ ಇದ್ದಿತ್ತು. ತಮ್ಮ ಸ್ವಂತ ಮಕ್ಕಳಂತೆ ಭಾವಿಸುತ್ತಿದ್ದರು. ಶಿಕ್ಷಕರಿಗೆ ವಿದ್ಯಾರ್ಥಿಗಳ ಒಟ್ಟಾರೆ ಅಭಿವೃದ್ಧಿಯತ್ತ ದುಡಿಯುವಲ್ಲಿ ಪ್ರಾಮಾಣಿಕವಾದ ತುಡಿತ ಎದ್ದು ಕಾಣುತ್ತಿತ್ತು. ಶಿಕ್ಷಕರಾಗಿ ಇರುವವರಿಗೆ ಅದೊಂದು ಕೇವಲ ಹಣ ಸಂಪಾದನೆಯ ದಾರಿ ಮಾತ್ರವಾಗಿರದೇ, ತಮ್ಮ ವೃತ್ತಿಯ ಘನತೆ, ನೈತಿಕತೆ ಮತ್ತು ಆದರ್ಶದ ಚೌಕಟ್ಟಿನ ಅರಿವನ್ನು ಹೊಂದಿದ್ದರು. ಇದು ಅವರನ್ನು ಸದಾ ಜಾಗೃತರಾಗಿ ಇರಿಸುತ್ತಿತ್ತು. ಈ ಎಲ್ಲದರ ಪರಿಣಾಮವಾಗಿ ಮಕ್ಕಳಿಗೆ ಶಿಕ್ಷಕರೆಂದರೆ ಭಯ, ಭಕ್ತಿಗಳೊಂದಿಗೆ ಆದರ, ಗೌರವಗಳೂ ಇದ್ದವು. ಎಳವೆಯಲ್ಲಿ ಬಿತ್ತಿದ ಉತ್ತಮ ಸಂಸ್ಕಾರ ಮತ್ತು ಮೌಲ್ಯಗಳ ಬೆಳಕು ಮಕ್ಕಳನ್ನು ಬದುಕಿನುದ್ದಕ್ಕೂ ತಪ್ಪು ಹಾದಿಗೆ ಹೋಗದಂತೆ ಸದಾ ಕಾಯುತ್ತಿದ್ದವು. ಕಲಿಸಿದ ಶಿಕ್ಷಕರು ನಿವೃತ್ತರಾದರೂ ಎಲ್ಲಾದರೂ ಕಂಡರೆ ಹಳೇ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಊರಿನವರೆಲ್ಲರಿಗೂ ಕೈ ಮುಗಿಯುವಷ್ಟು ಗೌರವ. ಹೀಗೆ ಪೋಷಕರು, ಶಿಕ್ಷಕರು (ಶಾಲೆ ಮತ್ತು ಶಾಲಾ ವ್ಯವಸ್ಥಾಪನಾ ಮಂಡಳಿ) ಮತ್ತು ವಿದ್ಯಾರ್ಥಿಗಳ ನಡುವಿನ ಈ ತ್ರಿಭುಜದ ಸಂಬಂಧವು ಸುಸಂಬದ್ಧವಾಗಿ ನಡೆಯುತ್ತಾ ಸಮಾಜದ ಅಭಿವೃದ್ಧಿಗೂ ಕಾಣಿಕೆ ನೀಡುತ್ತಿತ್ತು.

ಒಬ್ಬ ಶಾಲೆಗೆ ಹೋಗುವ ಮಗುವಿನ ತಾಯಿಯಾಗಿ ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಗಮನಿಸುವಾಗ ನನಗೆ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ. ಇಂದು ಮಕ್ಕಳಲ್ಲಿ ಶಿಕ್ಷಕರೆಂದರೆ ಅಷ್ಟು ಭಯವಿಲ್ಲ. ತಮ್ಮ ಟೀಚರ್ ಎಂಬ ಅಕ್ಕರೆ ಮತ್ತು ಅಭಿಮಾನ ಕಾಣುತ್ತದೆ ನಿಜ. ಆದರೆ, ಪ್ರತೀ ತರಗತಿಗೆ ತೇರ್ಗಡೆ ಹೊಂದುತ್ತಾ ಹೋದಂತೆ ಶಿಕ್ಷಕ ವರ್ಗವೂ ಬದಲಾಗುತ್ತಾ ಹೋಗುತ್ತಾರೆ. ಇಂದಿನ ಮಕ್ಕಳಿಗೆ ಶಾಲೆಯಲ್ಲಿ ಎಷ್ಟು ಕೀಟಲೆ ಮಾಡಿದರೂ, ಕಲಿಕೆಯಲ್ಲಿ ಹಿಂದುಳಿದರೂ ಹೊಡೆಯುವಂತಿಲ್ಲ. ಹೆಚ್ಚೆಂದರೆ ತರಗತಿಯನ್ನು ನಿಯಂತ್ರಣಕ್ಕೆ ತರುವ ಸಲುವಾಗಿ ಕಿರುಚಬಹುದು ಅಷ್ಟೇ. ಸರ್ಕಾರದ ಕಾನೂನೇ ಇದೆ. ಅಲ್ಲದೇ ಹದಿನಾಲ್ಕು ವರ್ಷದವರೆಗೆ ಕಡ್ಡಾಯ ಮೂಲಭೂತ ಶಿಕ್ಷಣದ ಅನ್ವಯ ಅನುತ್ತೀರ್ಣ ಮಾಡುವಂತೆಯೇ ಇಲ್ಲ. ಹಾಗೆಯೇ ಸರಕಾರಿ ಶಾಲಾ ಮಕ್ಕಳಿಗೆ ಹಲವಾರು ತರಹದ ಪ್ರೋತ್ಸಾಹಕ ಕೊಡುಗೆಗಳು ಲಭ್ಯವಿವೆ.

ಖಾಸಗಿ ಶಾಲೆಗಳಿಗೆ ಕಳುಹಿಸುವ ಪಾಲಕರಿಗೆ ತಾವಿಷ್ಟು ದುಬಾರಿ ಶುಲ್ಕ ಮತ್ತು ಡೊನೇಶನ್ ಕೊಡುವುದಿಲ್ಲವೇ ಎನ್ನುವ ಒಂದು ಬಗೆಯ ಅಹಂ. ಮಕ್ಕಳು ಶಾಲೆಯಲ್ಲಿ ಏನೇ ಮಾಡಿದರೂ ಬಂದು ದೂರು ಹೇಳುತ್ತಾರೆ. ಪೋಷಕರು 'ನೀನೇನು ಮಾಡಿದ್ದೀ?' ಎಂದು ಕೇಳುವ ಬದಲು ಶಿಕ್ಷಕರ ಮೇಲೆಯೇ ಗೂಬೆ ಕೂರಿಸಲು ಹಿಂಜರಿಯುವುದಿಲ್ಲ. ತಮ್ಮ ದುಡ್ಡಿನಿಂದಲೇ ಶಾಲೆ ನಡೆಯುವುದು, ಶಿಕ್ಷಕರಿಗೆ ಸಂಬಳ... ಎನ್ನುವ ಯೋಚನೆಯು ಹೆಚ್ಚುಗಾರಿಕೆಯದು. ವಾಸ್ತವವಾಗಿ ಅದರಲ್ಲಿ ಹುರುಳಿಲ್ಲದೇ ಇಲ್ಲ. ಹಾಗೆಯೇ ವೇಗದ ಅಂತರ್ಜಾಲದ ಈ ಯುಗದಲ್ಲಿ ಶಿಕ್ಷಕರಿಗಿಂತ ತಾವೇ ಹೆಚ್ಚು ತಿಳಿದುಕೊಂಡಿದ್ದೇವೆ ಎಂಬ ಭಂಡತನ ಕೆಲವು ಮಕ್ಕಳಲ್ಲಿ ಕಾಣಬಹುದು. ಉದಾಹರಣೆಗೆ: ಮನೆಯಲ್ಲಿ ಮೊಬೈಲ್ ಸುಲಭವಾಗಿ ಕೈಗೆ ತೆಗೆದುಕೊಂಡ ಮಕ್ಕಳು ಅಸಭ್ಯ ಶಬ್ದಗಳನ್ನು ಶಾಲೆಯಲ್ಲಿ ಉಳಿದ ಮಕ್ಕಳ ಮೇಲೆ ಪ್ರಯೋಗ ಮಾಡಿದರೂ ಹೆಚ್ಚಿನ ಕ್ರಮ ತೆಗೆದುಕೊಳ್ಳುವ ಹಾಗಿಲ್ಲ. ಇಂತಹುದೇ ಘಟನೆ ನಡೆದಾಗ ಉತ್ತಮ ಸಂಸ್ಕಾರ ಭರಿತ ಕುಟುಂಬಗಳಿಂದ ಬಂದ ಮಕ್ಕಳಿಗೆ ಆಘಾತವಾಗುತ್ತದೆ. ಇದನ್ನು ಬಗೆಹರಿಸುವ ದಾರಿ ಕಾಣುವುದಿಲ್ಲ.

ಶಿಕ್ಷಕ ವೃತ್ತಿಯನ್ನು ಗಳಿಕೆಯ ಒಂದು ಹಾದಿಯನ್ನಾಗಿ ಮಾತ್ರ ಮಾಡಿಕೊಂಡು ಕೇವಲ ಸಿಲಬಸ್ ಪೂರ್ತಿಗೊಳಿಸುವತ್ತ ಮಾತ್ರ ಗಮನಕೊಡುವ ಶಿಕ್ಷಕರು, ಮಕ್ಕಳಲ್ಲಿ ಸಂಸ್ಕಾರ, ಮೌಲ್ಯಗಳು ಮತ್ತು ಆದರ್ಶಗಳನ್ನು ಅಂತಃಕರಣಪೂರ್ವಕವಾಗಿ ತುಂಬಲು ಮರೆಯುತ್ತಿದ್ದಾರೆ. ಇವಲ್ಲದೇ ಕೆಲವು ಶಿಕ್ಷಕರು ತಮ್ಮ ಸ್ಥಾನದ ಘನತೆಯನ್ನು ಮರೆತು ಮಕ್ಕಳ ಮೇಲೆ ಪೈಶಾಚಿಕ ಕೃತ್ಯಗಳನ್ನು ಎಸಗಿ ಸಮಾಜದ ಮತ್ತು ಪೋಷಕರ ದೃಷ್ಟಿಯಲ್ಲಿ ಕೆಳಗಿಳಿಯುತ್ತಿದ್ದಾರೆ. ಪೋಷಕರೂ ಸಹ ಶಿಕ್ಷಕರ ಬಗ್ಗೆ ಮನೆಯಲ್ಲಿ ಏಕವಚನದಲ್ಲಿ ಹಗುರವಾಗಿ ಮಾತನಾಡುವುದು ಕಂಡು ಬರುತ್ತದೆ.

ಇವೆಲ್ಲ ಕಾರಣಗಳಿಂದ ಮಕ್ಕಳಲ್ಲಿ ಅವರ ಬಗ್ಗೆ ಗೌರವ ಭಾವನೆ ಮಾಸುತ್ತಿದೆ. ಅಷ್ಟೇ ಅಲ್ಲ, ಸಹಪಾಠಿಗಳೊಂದಿಗೆ ಸದರವಾಗಿ ವರ್ತಿಸಿದಂತೆ ಶಿಕ್ಷಕರಿಗೂ ತೊಂದರೆ ಮಾಡುವುದು, ಹಿಂಸೆ ಕೊಟ್ಟು, ಅವಮಾನ ಮಾಡಿ, ವಿಕೃತ ಆನಂದ ಪಡೆಯುವುದು, ಗಂಡು ಮತ್ತು ಹೆಣ್ಣು ಶಿಕ್ಷಕರ ನಡುವೆ ಸಂಬಂಧ ಕಲ್ಪಿಸಿ ಗಾಳಿಸುದ್ದಿ ತೇಲಿ ಬಿಡುವುದು, ಅಡ್ಡ ಹೆಸರು ಹಿಡಿದು ಕರೆಯುವುದು ಸೇರಿದಂತೆ ಚಿಕ್ಕದರಿಂದ ಗಂಭೀರ ಸ್ವರೂಪದ ಹಲವು ಬಗೆಯ ಚೇಷ್ಟೆಗಳನ್ನು ಹದಿಹರೆಯದ ಮಕ್ಕಳು ಎಸಗುತ್ತಿದ್ದಾರೆ. ಇದಕ್ಕೆ ಸಿನಿಮಾ, ದೃಶ್ಯ ಮಾಧ್ಯಮ ಹಾಗೂ ಸುಲಭದಲ್ಲಿ ಕೈಗೆಟಕುವ ಮೊಬೈಲ್ ವಿಡಿಯೋಗಳ ಕೊಡುಗೆ ಬಹಳಷ್ಟಿವೆ.

ಕಾಲ ಸರಿದಂತೆ ಗುರುವಿನ ಸ್ಥಾನ ಲಘುವಾಗುತ್ತಿದೆಯೇನೋ ಎನ್ನುವ ಆತಂಕ ಕಾಡುತ್ತದೆ. ತಂದೆ ತಾಯಿ ಮತ್ತು ದೇವರೊಂದಿಗೆ ಗುರುವನ್ನು ಸಮೀಕರಿಸಿದ ಶ್ರೇಷ್ಠ ಪರಂಪರೆ ನಮ್ಮದು. ಇಂದಿನ ವಿದ್ಯಾರ್ಥಿಗಳು ದೇಶದ ಮುಂದಿನ ಭವಿಷ್ಯ. ಹಿರಿಯರನ್ನು ಗೌರವಿಸದೇ ಲಘುವಾಗಿ ಭಾವಿಸುವ ಯುವ ಜನಾಂಗದಿಂದ ಏನನ್ನು ನಿರೀಕ್ಷಿಸಲು ಸಾಧ್ಯ...!!?

ಬಹುಶಃ ಸಮಸ್ಯೆಯು ಹಲವಾರು ಆಯಾಮಗಳನ್ನು ಹೊಂದಿರುವ ಕಾರಣ ಪರಿಹಾರಗಳನ್ನು ಹಲವು ಆಯಾಮಗಳಿಂದಲೇ ವಿಶ್ಲೇಷಿಸಬೇಕು. ಕಳೆದು ಹೋದ ಕಾಲವನ್ನು ಮತ್ತೆ ಮರಳಿ ತರಲು ಸಾಧ್ಯವಿಲ್ಲದೇ ಹೋದರೂ ಆ ಮೌಲ್ಯಗಳ ಪುನಸ್ಥಾಪನೆಗೆ ಪ್ರಯತ್ನಪಡಬಹುದು ಅಲ್ಲವೇ...

– ಪೋಷಕರು ಒಂದಿಷ್ಟು ಜವಾಬ್ದಾರಿಯುತರಾಗಿ ವರ್ತಿಸಿ ಮಕ್ಕಳನ್ನು ಉತ್ತಮ ದಾರಿಗೆ ತರಬೇಕು. ಮಕ್ಕಳು ಮೊದಲು ಕಲಿಯುವುದು ಮನೆಯಿಂದಲೇ ತಾನೇ. ಪಾಲಕರು ತಾವು ಮಕ್ಕಳಾಗಿದ್ದಾಗ ಕಲಿತ ಆದರ್ಶವನ್ನು ಮರೆಯಬಾರದು. ಮಕ್ಕಳಲ್ಲಿ ಗುರುವಿನ ಬಗ್ಗೆ ಗೌರವ ಇಡುವಂತೆ ತಿಳುವಳಿಕೆ ಹೇಳಬೇಕು.

– ಮಾದರಿ ಎನ್ನಿಸುವಂತಹ ವರ್ತನೆಗಳನ್ನು ದೊಡ್ಡವರು ರೂಢಿಸಿಕೊಂಡರೆ ಅದರ ಪರೋಕ್ಷ ಮತ್ತು ಅಪರೋಕ್ಷ ಪರಿಣಾಮ ಖಂಡಿತವಾಗಿ ಮಕ್ಕಳ ಮೇಲೂ ಆಗುತ್ತದೆ.

– ಸದ್ಗ್ರಂಥಗಳ ಪಠಣ, ಉತ್ತಮ ಆದರ್ಶ ಪುರುಷ ಹಾಗೂ ಮಹಿಳೆಯರ ಬಗೆಗಿನ ಪುಸ್ತಕಗಳನ್ನು ಓದಿಸುವುದು, ಕಥೆ ಹೇಳುವುದು, ಅಂತರ್ಯದ ಶ್ರೀಮಂತ ಗುಣಗಳಿಗೆ ಪ್ರಾಶಸ್ತ್ಯ ಕೊಟ್ಟು ಹೆಚ್ಚಿಸುವುದು, ಹೊರ ಜಗತ್ತು ಹಾಗೂ ಜನರನ್ನು ಉತ್ತಮ ದೃಷ್ಟಿಕೋನದಿಂದ ಕಾಣುವುದನ್ನು ಅಭ್ಯಾಸ ಮಾಡಿಸಬೇಕು.

– ಶಿಕ್ಷಕರು ತಮ್ಮ ದೌರ್ಬಲ್ಯಗಳನ್ನು ಮೀರಿ ಮಕ್ಕಳ ಅಭಿವೃದ್ಧಿಗೆ ಶ್ರದ್ಧೆಯಿಂದ ಕಂಕಣಬದ್ಧರಾಗಬೇಕು. ಶಿಕ್ಷಕರು ತಮ್ಮ ಸ್ಥಾನದ ಬಗ್ಗೆ ಗರ್ವ, ಘನತೆ ಉಳಿಸಿಕೊಳ್ಳಬೇಕು. ಮಕ್ಕಳನ್ನು ಸ್ನೇಹಿತರಂತೆ ಕಾಣುವ ಭರದಲ್ಲಿ ಸಡಿಲವಾಗಿ ವರ್ತಿಸಬಾರದು.

– ಯಾಂತ್ರಿಕವಾಗಿ ಪಾಠಗಳನ್ನು ಮಾಡಿ ಮುಗಿಸುವುದಕ್ಕಿಂತ ತೆಗೆದುಕೊಳ್ಳುವ ಸಂಬಳಕ್ಕೆ ಸೂಕ್ತ ನ್ಯಾಯವನ್ನು ಸಲ್ಲಿಸುವ ಪ್ರಯತ್ನಬೇಕು. ಏಕೆಂದರೆ ಈ ವೃತ್ತಿ ಉಳಿದ ವೃತ್ತಿಗಳಂತಲ್ಲ. ಭವಿಷ್ಯದ ಪ್ರಜೆಗಳನ್ನು ರೂಪಿಸುವ ಮಹತ್ವದ ಹೊಣೆ ತಮ್ಮ ಮೇಲಿದೆ ಎಂಬ ಅರಿವು ಇರಬೇಕು. ಹಾಗೆಯೇ ಎಳೆ ಚಿಗುರುಗಳ ಬೆಳವಣಿಗೆಯ ದೃಷ್ಟಿಯಿಂದ ವ್ಯಾಪಾರೀಕರಣಕ್ಕೆ ಹೊರತಾದ ಆಯಾಮದಿಂದಲೂ ಈ ಕ್ಷೇತ್ರದಲ್ಲಿರುವ ಶಿಕ್ಷಣಸಂಸ್ಥೆಗಳು ಕಾರ್ಯನಿರ್ವಹಿಸ ಬೇಕಾಗಿದೆ. ಶಾಲಾ ವ್ಯವಸ್ಥಾಪಕ ಮಂಡಳಿಯು ಸಭೆಯಲ್ಲಿ ಪಾಲಕರೆದುರು ತಮ್ಮ ಶಿಕ್ಷಕರನ್ನು ಅಗೌರವದಿಂದ ಕಾಣಬಾರದು.

– ಸಾಮಾಜಿಕ ಮಾಧ್ಯಮಗಳು ಮತ್ತು ದೃಶ್ಯ ಮಾಧ್ಯಮಗಳಲ್ಲಿ ಸಹ ಶಿಕ್ಷಕರನ್ನು ಅಥವಾ ವಿದ್ಯಾರ್ಥಿಗಳನ್ನು ಅಗೌರವದಿಂದ ನಡೆಸಿಕೊಳ್ಳುವ ಘಟನೆಗಳು ಋಣಾತ್ಮಕ ಪರಿಣಾಮಗಳನ್ನು ಬೀರುತ್ತವೆ. ಇಂತಹುವುಗಳನ್ನು ವಿಡಿಯೋ ಮಾಡಿ ವೈರಲ್ ಮಾಡುವ ಬದಲು ಪರಿಹಾರಕ್ಕೆ ಪ್ರಯತ್ನಿಸುವುದು ಉತ್ತಮ.

– ಒಂದು ಸಮಾಜವಾಗಿ ಜನರ ಮೇಲೂ ಬಹಳಷ್ಟು ಹೊಣೆ ಇದೆ. ಒಂದು ಒಟ್ಟಾರೆಯಾದ ಸಾಮೂಹಿಕ ಜವಾಬ್ದಾರಿಯುತ ಪ್ರಜ್ಞೆ ಹುಟ್ಟದೇ ಮಕ್ಕಳ ವರ್ತಮಾನ ಮತ್ತು ಭವಿಷ್ಯ ಸುಂದರವಾಗದು ಎಂಬ ಅರಿವು ಇರಲೇಬೇಕು. ಜಗತ್ತಿನ ಉತ್ತಮತೆಯೆಲ್ಲ ನಮ್ಮತ್ತ ಹರಿದು ಬರಲಿ ಎಂಬ ವೇದಗಳ ಮಾತಿನಂತೆ ನಮ್ಮ ನಡೆ ಇರಲಿ.


PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)



ಪ್ರೊ : ನಯನಾಭಿರಾಮ ಸ್ವಾಮಿ
ಮೊಬೈಲ್ : 9449101303, 9632500864

ಉದಯಾದ್ರಿ ಕೆಟರರ್ಸ್

ಉಮಾಮಹೇಶ್ವರ ಉದಯಾದ್ರಿ ಮಠ,
ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ,
"ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.

ಮದುವೆ ಇನ್ನಿತರ ಸಮಾರಂಭಗಳಿಗೆ ಶುಚಿರುಚಿಯಾದ ಅಡುಗೆ ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ ಪಡಿಸಿಕೊಳ್ಳಬಹುದು.

## ಶುಭ ವಿವಾಹ

ಡಾ। ತನುಜಾ ಮತ್ತು ಸಾಂತೂರ್ ಅಮರದೀಪ್ ದಂಪತಿಯ ಪುತ್ರ **ಚಿ। ಹೇಮಂತ್ ಸಾಂತೂರ್ ಅಮರದೀಪ್** ಅವರ ವಿವಾಹವು ಶ್ರೀಮತಿ ಸುಮನಾ ಮತ್ತು ಪಿ. ರವೀಂದ್ರ ಹೇರ್ಲೆ ದಂಪತಿಯ ಪುತ್ರಿ **ಚಿ। ಸೌ। ಡಾ। ಅನನ್ಯ**ರವರೊಂದಿಗೆ ತಾ.14.12.2023ರಂದು ಬ್ರಹ್ಮಾವರದ ಶಾಮಿಲಿ ಶನಯದಲ್ಲಿ ಜರಗಿತು.

**** ****

ಹಿರಿಯಡ್ಕ ಆಲುಗ್ಗೇಲು ಜಗದೀಶ್ ರಾವ್ ಮತ್ತು ಶ್ರೀಮತಿ ಅನಿತಾ ರಾವ್ ದಂಪತಿಯ ಪುತ್ರಿ **ಚಿ। ಸೌ। ಅರ್ಪಿತಾ** ಅವರ ವಿವಾಹವು ಬಪ್ಪನಾಡು ದಿನಮಣಿ ಮತ್ತು ಶ್ರೀಮತಿ ಜ್ಯೋತಿ ದಂಪತಿಯ ಪುತ್ರ **ಚಿ। ಪ್ರಣವ್**ರವರೊಂದಿಗೆ ತಾ.15.12.2023ರಂದು ಶ್ರೀ ಶಾರದಾ ಮಂಟಪ ಉಡುಪಿಯಲ್ಲಿ ಜರಗಿತು.

**** ****

ಕಂಬದಕೋಣೆ ನರಸಿಂಹ ರಾವ್ ಮತ್ತು ಶ್ರೀಮತಿ ಶ್ರೀಲತಾ ದಂಪತಿಯ ಪುತ್ರ **ಚಿ। ಪ್ರಿತೀಶ್ ರಾವ್** ಅವರ ವಿವಾಹವು ಡಾ। ಕೆ.ಎಸ್. ಸುಬ್ರಹ್ಮಣ್ಯ ಮತ್ತು ಡಾ। ಶ್ರೀಮತಿ ಶ್ರೀಲಕ್ಷ್ಮೀ ದಂಪತಿಯ ಪುತ್ರಿ **ಚಿ। ಸೌ। ಸಹನಾ**ರವರೊಂದಿಗೆ ತಾ.14.12.2023ರಂದು ಬೆಂಗಳೂರಿನ ಜ್ಞಾನಭಾರತಿ ಸಮುದಾಯ ಭವನದಲ್ಲಿ ಜರಗಿತು.

**** ****

ಶ್ರೀಮತಿ ಜಯಶ್ರೀ ಮತ್ತು ನಾರಾಯಣ ಉಬರಳೆ ದಂಪತಿಯ ಪುತ್ರಿ **ಚಿ। ಸೌ। ವಿಜಯಲಕ್ಷ್ಮಿ** ಅವರ ವಿವಾಹವು ಶ್ರೀಮತಿ ರಜನಿ ಮತ್ತು ಕೆ. ದಿನೇಶ್ ರಾವ್ ದಂಪತಿಯ ಪುತ್ರ **ಚಿ। ರಂಜಿತ್ ಕುಮಾರ್**ರವರೊಂದಿಗೆ ತಾ.14.12.2023 ರಂದು ಪುತ್ತೂರಿನ ಶ್ರೀನಿವಾಸ ಸಭಾಭವನದಲ್ಲಿ ಜರಗಿತು.

**** ****

ಶ್ರೀಮತಿ ವಿಜಯಲಕ್ಷ್ಮಿ ಮತ್ತು ದಿವಾಕರ ರಾವ್ ಚೊಕ್ಕಾಡಿ ದಂಪತಿಯ ಪುತ್ರ **ಚಿ। ಕಾರ್ತಿಕ್ ಕುಮಾರ್** ಸಿ. ಅವರ ವಿವಾಹವು ಶ್ರೀಮತಿ ಸುಶೀಲಾ ಮತ್ತು ಹರೀಶ್ ರಾವ್ ಅಕಿರೆಕಾಡು ದಂಪತಿಯ ಪುತ್ರಿ **ಚಿ। ಸೌ। ಸುಪ್ರಭ ಎ. (ಲಹರಿ)** ರವರೊಂದಿಗೆ ತಾ.15.12.2023ರಂದು ಬೆಳ್ಳಾರೆ ಅಜಪಿಲ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಜರಗಿತು.

**** ****

ಕೊಕ್ರಾಡಿಯ ಯಜ್ಞೇಶ್ ರಾವ್ ಮತ್ತು ಶ್ರೀಮತಿ ಸುನಂದಾ ದಂಪತಿಯ ಪುತ್ರ **ಚಿ। ಅನಿಲ್ ಕುಮಾರ್** ಅವರ ವಿವಾಹವು ಬ್ರಹ್ಮಾವರದ ಚಂದ್ರಶೇಖರ್ ಮತ್ತು ಶ್ರೀಮತಿ ವಿಜಯಲಕ್ಷ್ಮಿ ದಂಪತಿಯ ಪುತ್ರಿ **ಚಿ। ಸೌ। ರಮ್ಯಾ** ರವರೊಂದಿಗೆ ತಾ.20.12.2023ರಂದು ಮಟಪಾಡಿ, ಬ್ರಹ್ಮಾವರದಲ್ಲಿ ಜರಗಿತು.

**** ****

ಡಾ। ಕಡಬ ಜಯಪ್ರಕಾಶ್ ರಾವ್ ಮತ್ತು ಶ್ರೀಮತಿ ಸ್ವಪ್ನಾ ದಂಪತಿಯ ಪುತ್ರಿ **ಚಿ। ಸೌ। ನಂದಿತಾ** ಅವರ ವಿವಾಹವು ಡಾ। ಎನ್. ಸಂದೀಪ್ ಶಾಸ್ತ್ರಿ ಮತ್ತು ಶ್ರೀಮತಿ ಶೈಲಜಾ ದಂಪತಿಯ ಪುತ್ರ **ಚಿ। ಸಂಜಲ್**ರವರೊಂದಿಗೆ ತಾ.25.12.2023ರಂದು ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿಯಲ್ಲಿ ಜರಗಿತು.

**** ****

ಶ್ರೀಮತಿ ಪದ್ಮಾ ಮತ್ತು ಎಂ. ದಿವಾಕರ್ ರಾವ್ ದಂಪತಿಯ ಪುತ್ರ (ಕುವೆಂಪುನಗರ ಮೈಸೂರು) **ಚಿ। ಕಾರ್ತಿಕೇಯ** ಅವರ ವಿವಾಹವು ಶ್ರೀಮತಿ ನಳಿನಿ ಮತ್ತು ಆನಂದ್ ರಾವ್ ದಂಪತಿಯ ಪುತ್ರಿ (ಚಿತ್ರಾಪುರ, ಸುರತ್ಕಲ್) **ಚಿ। ಸೌ। ಮಾನಸ**ರವರೊಂದಿಗೆ ತಾ.21.12.2023ರಂದು ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಕಲ್ಯಾಣ ಮಂಟಪ ಕುಳಾಯಿ, ಸುರತ್ಕಲ್‌ನಲ್ಲಿ ಜರಗಿತು.

**** ****

ಕೀ.ಶೇ. ಬಪ್ಪನಾಡು ನಾರಾಯಣ ರಾವ್‌ರ ಮೊಮ್ಮಗ ದಿ। ಲಲಿತಾ ರಾವ್ ಮತ್ತು ಪುರುಷೋತ್ತಮ ರಾವ್ ಬಪ್ಪನಾಡು ದಂಪತಿಯ ಪುತ್ರ **ಚಿ। ಸೂರಜ್ ರಾವ್** ಬಪ್ಪನಾಡು ಅವರ ವಿವಾಹವು ಶ್ರೀಮತಿ ಜ್ಯೋತಿ ಮತ್ತು ನಿತ್ಯಾನಂದ ಹೆಬ್ಬಾರ್ ರವರ ಪುತ್ರಿ **ಚಿ। ಸೌ। ರಾಗಿಣಿ ಜೆ. ಹೆಬ್ಬಾರ್**ರವರೊಂದಿಗೆ ತಾ.22.12.2023ರಂದು ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು, ಉಡುಪಿಯಲ್ಲಿ ಜರಗಿತು.

**** ****

ಕಾಪು ಶ್ರೀಮತಿ ಉಷಾ ಮತ್ತು ಮುರುಳೀಧರ ರಾವ್ ದಂಪತಿಯ ಪುತ್ರ **ಚಿ। ಭರತ್ ಕುಮಾರ್** ಅವರ ವಿವಾಹವು ಶ್ರೀಮತಿ ಮಲ್ಲಿಕಾ ಮತ್ತು ಕೀರ್ತಿಶೇಷ ಪ್ರದೀಪ ಹೆಬ್ಬಾರ್ ದಂಪತಿಯ ಪುತ್ರಿ **ಚಿ। ಸೌ। ತೇಜಸ್ವಿನಿ**ರವರೊಂದಿಗೆ ತಾ. 08.01.2024ರಂದು "ಶ್ರೀ ಗುರುನರಸಿಂಹ ಸಭಾಭವನ" ಸಾಲಿಗ್ರಾಮದಲ್ಲಿ ಜರಗಿತು.



ಕೆ. ದಿನಮಣಿ ಶಾಸ್ತ್ರೀ
ಮೊಬೈಲ್ : 8277190632
9482284970
ಚಿತ್ತಾರ ಫೋಟೋ ಆರ್ಟ್
ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ
ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ–576213.

*With Best Complimemts From*
SRI M. SHAILESH RAO
Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com


## ಕಬ್ಬಿನಾಲೆಯಲ್ಲಿ ಕೆಸರುಗದ್ದೆ ಓಟ



ಹೆಬ್ಬಾರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕಬ್ಬಿನಾಲೆ ಆಶ್ರಯದಲ್ಲಿ ತಾ.07.01.2024ರಂದು ಕಬ್ಬಿನಾಲೆ ಕೆಳಮನೆ ಜಯಂತ ಕುಮಾರ್ ಹೆಬ್ಬಾರ್ ಅವರ ಕಂಬಳಗದ್ದೆಯಲ್ಲಿ ಜರಗಿದ ಕೆಸರುಗದ್ದೆ ಕ್ರೀಡಾಕೂಟ. ಕ್ರೀಡಾಕೂಟದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ದಂಪತಿಯ ಕೆಸರುಗದ್ದೆ ಓಟ ಗಮನ ಸೆಳೆಯಿತು.



ಬೆಳ್ತಂಗಡಿ ತಾಲೂಕು ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನದಲ್ಲಿ ಧನುರ್ಮಾಸದ 3ನೇ ಸೋಮವಾರದಂದು (01.01.2024) ಬೆಳ್ತಂಗಡಿ ತಾಲೂಕು ಶ್ರೀ ಸುಬ್ರಹ್ಮಣ್ಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ ಇದರ ಸದಸ್ಯರಿಂದ ಶಿವ ಪಂಚಾಕ್ಷರಿ ಪಠಣ.

## ಭೀಮರಥ ಶಾಂತಿ

ದಿನಾಂಕ 27–12–2023ರಂದು ಶ್ರೀಮತಿ ಗೀತಾ ಮತ್ತು ಮಂಜುನಾಥಯ್ಯ ಸಕ್ಕಟ್ಟು ಇವರಿಗೆ "ಲಕ್ಷ್ಮೀ ನಿಲಯ" ಸೌಕೂರ್‌ನಲ್ಲಿ ಭೀಮರಥ ಶಾಂತಿಯನ್ನು ಮಕ್ಕಳು ಆಚರಿಸಿದರು. ಈ ಸಂದರ್ಭದಲ್ಲಿ ಮಕ್ಕಳು, ಬಂಧು ಮಿತ್ರರು ಭಾಗವಹಿಸಿದ್ದರು.

## 50ನೇ ವರ್ಷದ ವಿವಾಹ ಸಂಭ್ರಮ

ದಿನಾಂಕ 24.12.2023ರಂದು ನಂದಿಕೂರು ಹರೀಶ್ಚಂದ್ರ ರಾವ್ ಮತ್ತು ಸುಮಂಗಲಾ ಹೆಚ್. ರಾವ್ ತಮ್ಮ 50ನೇ ವರ್ಷದ ವಿವಾಹದ ಸಂದರ್ಭದಲ್ಲಿ ಪಡುಬಿದ್ರೆ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದಲ್ಲಿ ತಮ್ಮ ಮಕ್ಕಳು, ಮೊಮ್ಮಕ್ಕಳು, ಬಂಧುಮಿತ್ರರೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಭೋಜನದೊಂದಿಗೆ ನಡೆಸಿದರು.

## ಶ್ರೀ ಲಕ್ಷ್ಮೀಹೃದಯ ಹೋಮ

ಕೊಡವೂರು ಬ್ರಾಹ್ಮಣ ಸಂಘದ ಅಧ್ಯಕ್ಷರು, ನಮ್ಮ ಸಮಾಜದ ಹಿರಿಯರೂ ಆದ ಪಿ. ಗುರುರಾಜ್ ರಾವ್ ಕೊಡವೂರು ಹಾಗೂ ಪತ್ನಿ ಶ್ರೀಮತಿ ಸಂಪತ್ತಿ ಮತ್ತು ಮಕ್ಕಳು, ಮೊಮ್ಮಕ್ಕಳು ಬಂಧುಗಳೊಂದಿಗೆ ಕೊಡವೂರು ವಿಪ್ರ ಶ್ರೀ ಸಭಾಭವನದಲ್ಲಿ ತಾ.25.12.2023ರಂದು ಲಕ್ಷ್ಮೀನಾರಾಯಣ ದೇವತಾನುಗ್ರಹಕ್ಕಾಗಿ "ಶ್ರೀ ಲಕ್ಷ್ಮೀಹೃದಯ ಹೋಮ" ನಡೆಸಿ ಮಿತ್ರಭೋಜನ ನೀಡಿದರು.

## ಉಪನಯನ

ಶ್ರೀಮತಿ ರಮಿತಾ ಮತ್ತು ಪ್ರೀತಮ್ ದಂಪತಿಯ ಪುತ್ರ ಮತ್ತು ಶ್ರೀಮತಿ ವತ್ಸಲಾ ಮತ್ತು ಬೋಳಾ ಅಚ್ಯುತ್ ರಾವ್ ಅವರ ಮೊಮ್ಮಗ **ಚಿ। ಸಮರ್ಥ** ಅವರ ಉಪನಯನವು ತಾ.29.12.2023 ರಂದು ಶ್ರೀ ಸುಬ್ರಹ್ಮಣ್ಯ ಸದನ, ಮಂಗಳೂರಿನಲ್ಲಿ ನಡೆಯಿತು.

## ಶುಭ ಜನನ

ಗಣೇಶ್ ರಾವ್ (ಬೆಳ್ಮಣ್ ಭವಾನಿಶಂಕರ್ ಶಾನುಭಾಗ್ ಮತ್ತು ಶ್ರೀಮತಿ ವಸುಂದರ ದಂಪತಿಯ ಪುತ್ರ) ಮತ್ತು ಶ್ರೀಮತಿ ಕೃತಿಕಾ (ಡಾ। ಕಡಬ ಜಯಪ್ರಕಾಶ್ ಮತ್ತು ಶ್ರೀಮತಿ ಸ್ವಪ್ನಾ ರಾವ್ ದಂಪತಿಯ ಪುತ್ರಿ) ರವರಿಗೆ ತಾ.03.01.2024ರಂದು ಹೆಣ್ಣು ಮಗುವಿನ ಜನನ.


GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand,
City Towers, Service Bus Stand, Near Rao and Rao Circle, State Bank,
Branch at Mahalaxmi Prabha Complex, Market Road, Opp Tajmahal Hotel, Karkala

## ನಿಧನ



ದಿ। ಅದ್ಯಪಾಡಿ ಮುಕುಂದ ರಾವ್ ಅವರ ಪತ್ನಿ ಶ್ರೀಮತಿ ರಮಾಬಾಯಿಯವರು 84ನೇ ವಯಸ್ಸಿನಲ್ಲಿ ತಾ.17.12.2023ರಂದು ಬೆಂಗಳೂರಿನ ಕೋಣನಕುಂಟೆಯಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.

★★★★ ★★★★



ಬೈಂದೂರಿನ ದಿ। ನಾಗರಾಜ ರಾವ್ ಧಾರೇಶ್ವರ ಅವರ ಪತ್ನಿ ಶ್ರೀಮತಿ ರಮಾ ಎನ್. ರಾವ್ ಅವರು 76ನೇ ವಯಸ್ಸಿನಲ್ಲಿ ತಾ.17.12.2023ರಂದು ನಿಧನರಾದರು. ಅವರು ಒಬ್ಬ ಪುತ್ರ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ದಿ। ನಾರಾಯಣಯ್ಯ ಉಬರಳೆ ಅವರ ಪುತ್ರ ಅಶೋಕ್ ರಾವ್ ಉಬರಳೆ ಅವರು 51ನೇ ವಯಸ್ಸಿನಲ್ಲಿ ಅನಾರೋಗ್ಯದಿಂದ ಮಂಗಳೂರಿನ ಕೊಲಾಸೊ ಆಸ್ಪತ್ರೆಯಲ್ಲಿ ತಾ.22.12.2023ರಂದು ನಿಧನರಾದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಪ್ರಕಾಶ್ ರಾವ್ ಕೇದಿಗೆಯವರು 68ನೇ ವಯಸ್ಸಿನಲ್ಲಿ ತಾ.25.12.2023ರಂದು ಕಾರ್ಕಳದಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★




ಜಗದೀಶ್ ಶರ್ಮಾ (ದಿ। ಡಾ। ನಾರಾಯಣ ಶರ್ಮಾರವರ ಪುತ್ರ) ರವರು 86ನೇ ವಯಸ್ಸಿನಲ್ಲಿ ತಾ.01.01.2024ರಂದು ನಿಧನರಾದರು.

★★★★ ★★★★



ಪಾದೆಬೆಟ್ಟು ಕುಮಾರ್ ರಾವ್ ಅವರು 79ನೇ ವಯಸ್ಸಿನಲ್ಲಿ ತಾ.01.01.2024 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ ಶ್ರೀಮತಿ ರಾಜೇಶ್ವರಿ ಮತ್ತು ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ.

★★★★ ★★★★



ಶ್ರೀಮತಿ ಸವಿತಾ ವೀರರಾಘವನ್ ಅವರು (ದಿ। ಪಡುಬಿದ್ರಿ ರಾಮಕೃಷ್ಣ ರಾವ್ ಮತ್ತು ದಿ। ಶ್ರೀಮತಿ ಪದ್ಮಾವತಿ ದಂಪತಿಯ ಪುತ್ರಿ) ತಾ.06.01.2024ರಂದು ಕೊಚ್ಚಿಯಲ್ಲಿ ನಿಧನರಾದರು. ಅವರು ಚುನಾಬಟ್ಟಿ, ಸಿಯಾನ್ ಮುಂಬೈ ನಿವಾಸಿಯಾಗಿದ್ದಾರೆ. ಅವರು ಪತಿ ಮತ್ತು ಒಬ್ಬ ಪುತ್ರನನ್ನು ಅಗಲಿದ್ದಾರೆ.

★★★★ ★★★★



ಸುರತ್ಕಲ್ ಕಾನ ನಿವಾಸಿ ಉದ್ಯಾವರ ಶಿವಪ್ರಸಾದ್ ರಾವ್ ಅವರು 83ನೇ ವಯಸ್ಸಿನಲ್ಲಿ ತಾ.09.01.2024ರಂದು ನಿಧನರಾದರು. ದಿ। ವೆಂಕಟರಾವ್ ಉದ್ಯಾವರ ಇವರ ಪುತ್ರರಾದ ಇವರು Rtd. Office Suprintendent, New Mangalore Trust ಆಗಿದ್ದು ಆಧ್ಯಾತ್ಮಿಕ ಚಿಂತಕರಾಗಿದ್ದು ವೇದ ಸಾಹಿತ್ಯವನ್ನು ಅಭ್ಯಸಿಸಿ ಪರಿಣತರಾಗಿದ್ದರು. ಇವರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಮೋಹನ್ ರಾವ್ ಬೆಳ್ಳೆ, ಕುಂಜಾರುಗಿರಿ (70 ವ) ತಾ.26.12.2023ರಂದು ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.

ಬೆಳ್ಳೆ ಮಂಡಲ ಪಂಚಾಯತ್ ಸದಸ್ಯರಾಗಿದ್ದು, ಗ್ರಾಮ ಪಂಚಾಯತಿ ಸದಸ್ಯರಾಗಿ, ಕುಂಜಾರುಗಿರಿ ನವಜ್ಯೋತಿ ಯುವಕ ಮಂಡಲದ ಅಧ್ಯಕ್ಷರಾಗಿ, ಇನ್ನಂಜೆ ವ್ಯವಸಾಯ ಸಹಕಾರಿ ಸಂಘದ ಅಧ್ಯಕ್ಷರಾಗಿಯೂ, ಪಡುಬೆಳ್ಳೆ–ಪಾಜೆಯಿ ಹಾಲು ಉತ್ಪಾದಕರ ಸಂಘದ ಸ್ಥಾಪಕ ಅಧ್ಯಕ್ಷರಾಗಿ ಇದುವರೆಗೂ ಅಧ್ಯಕ್ಷರಾಗಿದ್ದು, ಹಾಲು ಉತ್ಪಾದಕರ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗಿ, ಕೃಷಿ ಮತ್ತು ಹೈನುಗಾರಿಕೆಯಲ್ಲಿ, ಪರಿಸರದಲ್ಲಿ ಹೆಸರುವಾಸಿಯಾಗಿದ್ದ, ಅದರಲ್ಲೂ ಜಾನುವಾರುಗಳನ್ನು ದೇವರಂತೆ ನೋಡಿಕೊಳ್ಳುತ್ತಿದ್ದ ಸಭ್ಯ ಸಜ್ಜನ ವ್ಯಕ್ತಿಯಾಗಿ ಜನಾನುರಾಗಿದ್ದರು.

★★★★ ★★★★

ದಿ। ಮಾಂಟ್ರಾಡಿ ಅನಂತಕೃಷ್ಣ ರಾವ್ ಅವರ ಪತ್ನಿ ಶ್ರೀಮತಿ ಲೀಲಾವತಿ ಅವರು 84ನೇ ವಯಸ್ಸಿನಲ್ಲಿ ತಾ.25.12.2023ರಂದು ಮಣಿಪಾಲದಲ್ಲಿ ನಿಧನರಾದರು. ಇವರು ಉಡುಪಿಯಲ್ಲಿ ನೆಲೆಸಿದ್ದರು. ಅವರು ಇಬ್ಬರು ಪುತ್ರರು ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.




### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-00ರಿಂದ

**ತಾ.29-01-2024 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.06-02-2024** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ **5-00**ರಿಂದ **6-00**ರ ವರೆಗೆ)

**ತಾ.31-01-2024** ಹಾಗೂ **14.02.2024** ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ **9-00**ರಿಂದ ಮಧ್ಯಾಹ್ನ **12-00** ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮಕರ ಮಾಸದ ವಿಶೇಷ ದಿನಗಳು

| | | | |
|---|---|---|---|
| 14.01.2024 | ಮಕರ ಸಂಕ್ರಮಣ, ಉತ್ತರಾಯಣ ಆರಂಭ | 29.01.2024 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.27ಕ್ಕೆ |
| 15.01.2024 | ಉಡುಪಿ ಚೂರ್ಣೋತ್ಸವ | 06.02.2024 | ಸರ್ವೈಕಾದಶೀ |
| 16.01.2024 | ಕಿರುಷಷ್ಠೀ | 09.02.2024 | ಅಮಾವಾಸ್ಯೆ |
| 18.01.2024 | ಉಡುಪಿ ಶ್ರೀ ಪುತ್ತಿಗೆ ಮಠದ ಪರ್ಯಾಯೋತ್ಸವ | 10.02.2024 | ಶಿಶಿರ ಋತು ಮಾಘ ಮಾಸದ ಶುಕ್ಲ ಪಕ್ಷಾರಂಭ |
| 21.01.2024 | ಸರ್ವೈಕಾದಶೀ | 13.02.2024 | ಕುಂಭ ಸಂಕ್ರಮಣ |
| 25.01.2024 | ಹುಣ್ಣಿಮೆ | 16.02.2024 | ರಥಸಪ್ತಮಿ |
| 26.01.2024 | ಹೇಮಂತ ಋತು ಪುಷ್ಯ ಮಾಸದ ಕೃಷ್ಣ ಪಕ್ಷಾರಂಭ | | |

# ಮೂಡುಬಿದಿರೆಯಲ್ಲಿ ಬ್ರಾಹ್ಮಣ ಸಮಾಜದವರಿಂದ ಲಕ್ಷ ಗಾಯತ್ರೀಜಪ ಯಜ್ಞ



ಶಿವಳ್ಳಿ, ಸ್ಥಾನಿಕ, ಹವ್ಯಕ, ದೇಶಸ್ತ, ಕರಾಡ, ಚಿತ್ಪಾವನ, ಕೋಟ ಬ್ರಾಹ್ಮಣರು ಒಂದಾಗಿ ಸೇರಿ ಲೋಕ ಕಲ್ಯಾಣಾರ್ಥವಾಗಿ ಮೂಡುಬಿದಿರೆ ಅಲಂಗಾರ್ ದೇವಸ್ಥಾನದಲ್ಲಿ ಆಯೋಜಿಸಿದ ಲಕ್ಷ ಗಾಯತ್ರೀಜಪ ಯಜ್ಞ ಸಂಪನ್ನಗೊಂಡಿತು. ಪ್ರಾತಃ ದೇವತಾ ಪ್ರಾರ್ಥನೆ, ಗಣಯಾಗ, ರುದ್ರ ಪಠಣದೊಂದಿಗೆ ಸಾಮಾನ್ಯ ಐನೂರಕ್ಕೂ ಮಿಕ್ಕ ವಿಪ್ರಬಂಧುಗಳು ಈ ಜಪ ಯಜ್ಞದಲ್ಲಿ ಭಾಗಿಗಳಾಗಿ 6 ಹೋಮ ಕುಂಡಗಳಲ್ಲಿ ಲಕ್ಷ ಜಪದ ದಶಮಾಂಶದ 24 ಸಾವಿರ ಆಹುತಿಯೊಂದಿಗೆ 60 ಜನ ಋತ್ವಿಜರು ಭಾಗವಹಿಸಿ ಗಾಯತ್ರಿ ಉಪಾಸನೆ ಮಾಡಿ ಲೋಕ ಕ್ಷೇಮದ ಪ್ರಾರ್ಥನೆಯನ್ನು ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ ಸಲ್ಲಿಸಿದರು. ಈ ಸಂದರ್ಭ ಸಾಮವೇದದ ಗಾಯತ್ರೀ ಉಪಾಸನೆ ಬಗ್ಗೆ ಮಣಿಪಾಲದ ಡಾ। ಮಾಲತಿ ಅವರಿಂದ ಸ್ವರ ಸಹಿತ ಪಾಠ ನೆರವೇರಿತು. ಬಳಿಕ ಕೆ. ಶ್ರೀಪತಿ ಭಟ್ ಇವರ ಅಧ್ಯಕ್ಷತೆಯಲ್ಲಿ, ವೇ.ಮೂ. ಈಶ್ವರ ಭಟ್ ಇವರ ಗೌರವ ಉಪಸ್ಥಿತಿಯಲ್ಲಿ ಪುರೋಹಿತ ಪ್ರಮುಖರಾದ ವೇ.ಮೂ. ಅಡಿಗಳ್ ಅನಂತಕೃಷ್ಣ ಭಟ್ ಪುತ್ತಿಗೆ, ಅಶ್ವಥಪುರ ವೇ.ಮೂ. ಪ್ರಭಾಕರ್ ಭಟ್, ಪಾವಂಜೆ ವೇ.ಮೂ. ವಾಗೇಶ್ ಶಾಸ್ತ್ರೀ, ವೇ.ಮೂ. ಸುಬ್ರಹ್ಮಣ್ಯ ಭಟ್, ಏರ್ಮಲೆ ವೇ.ಮೂ. ಶ್ರೀನಿಧಿ ಅಂಭ್ಯಂಕರ್, ಮುಂಡಾಜೆ ವೇ.ಮೂ. ಶಿವಪ್ರಸಾದ್ ಭಟ್ ಪೈಯೋಳಿಕೆ, ಇವರು ಗಾಯತ್ರಿ ಜಪದ ಮಹತ್ವದ ಬಗ್ಗೆ ಸೇರಿದ ಸಮಸ್ತ ವಿಪ್ರಬಂಧುಗಳಿಗೆ ವಿವರಿಸಿ ಮಂತ್ರಾಕ್ಷತೆಯೊಂದಿಗೆ ಕಾರ್ಯಕ್ರಮ ಸಮಾಪನಗೊಂಡಿತು. ಜಪ ಸಮಿತಿಯ ಪ್ರಧಾನ ಕಾರ್ಯದರ್ಶಿ ಮೂಡಬಿದ್ರಿ ಶ್ರೀ ಆದಿಶಂಕರ, ಸ್ಥಾನಿಕ ಬ್ರಾಹ್ಮಣ ಪರಿಷತ್ ಅಧ್ಯಕ್ಷರು ಬೆಳ್ವಾಯಿ ಎಂ. ದೇವಾನಂದ ಭಟ್ ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿ, ಜಪ ಸಮಿತಿ ಕೋಶಾಧಿಕಾರಿ ಶ್ರೀ ಆದಿಶಂಕರ ಪರಿಷತ್ ಗೌರವ ಅಧ್ಯಕ್ಷರು ಆದ ಬೊಕ್ಕಸ ಚಂದ್ರಶೇಖರ್ ರಾವ್ ಧನ್ಯವಾದ ನೀಡಿದರು.



## ಶ್ರೀ ಶಾರದಾ ಮಂಟಪದಲ್ಲಿ ಮಹಾಮಂಡಲದ ಸಭೆ



ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಆಡಳಿತ ಮಂಡಳಿಯ ತುರ್ತು ಸಭೆಯು ತಾ.24.12.2023ರ ಭಾನುವಾರ ಮಧ್ಯಾಹ್ನ ಗಂಟೆ 11.30ಕ್ಕೆ, ಉಡುಪಿಯ ಶ್ರೀ ಶಾರದಾ ಮಂಟಪದ ಅಧ್ಯಕ್ಷರ ಕಚೇರಿಯಲ್ಲಿ ಮಂಡಲದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್‌ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್‌ರವರ ಸ್ವಾಗತ ಮತ್ತು ಪ್ರಾಸ್ತಾವಿಕ ಮಾತುಗಳೊಂದಿಗೆ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಶ್ರೀ ರಾಮ ಮಂದಿರದ ಲೋಕಾರ್ಪಣೆ ಸಂದರ್ಭ ತಾ.22.01.2024 ರಂದು ಸಮಾವೇಶ ಹಾಗೂ ದೀಪೋತ್ಸವ ಕಾರ್ಯಕ್ರಮವನ್ನು ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಹಾಗೂ ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ ಜಂಟಿಯಾಗಿ, ಸಂಜೆ ಗಂಟೆ 6.00 ರಿಂದ ರಾತ್ರಿ 9.00 ರವರೆಗೆ ಆಚರಿಸುವುದೆಂದು ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕರಸೇವೆಯಲ್ಲಿ ಭಾಗವಹಿಸಿದ ನಮ್ಮ ಸಮಾಜದ ಕಾರ್ಯಕರ್ತರನ್ನು ಗುರುತಿಸುವ ಕಾರ್ಯ ಹಮ್ಮಿಕೊಳ್ಳುವುದೆಂದು ತೀರ್ಮಾನಿಸಲಾಯಿತು. ಎಲ್ಲಾ 19 ಸಂಘಗಳವರು ತಮ್ಮ ವ್ಯಾಪ್ತಿಯಲ್ಲಿ ಬರುವವರ ವಿವರಗಳನ್ನು ಕಳುಹಿಸಿ ಕೊಡುವಂತೆ ವಿನಂತಿಸಿಕೊಳ್ಳಲಾಯಿತು. ಈ ಕಾರ್ಯಕ್ರಮ ಯೋಜನೆಯ ವಿವರ ಹಾಗೂ ಆಮಂತ್ರಣವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. ಸಭೆಯ ಕೊನೆಯಲ್ಲಿ ಕಾರ್ಯದರ್ಶಿಯ ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

## ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ



ದಿನಾಂಕ 06.01.2024ರಂದು ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ ಇದರ ಮಾಸಿಕ ಸಭೆಗೆ ಮಹಾಮಂಡಲದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಪ್ರಧಾನ ಕಾರ್ಯದರ್ಶಿಗಳಾದ ಮುರಳೀಧರ ಶರ್ಮ ನಿಟ್ಟೆ ಹಾಗೂ ಕೋಶಾಧಿಕಾರಿಗಳಾದ ಉದಯ ಕುಮಾರ್ ರವರು ಆಗಮಿಸಿ ಮಹಾಮಂಡಲದ ಯೋಜನೆಗಳು ಹಾಗೂ ಇತರೆ ಮಾಹಿತಿ ನೀಡಿದರು. ಸ್ಥಾನಿಕ ಬ್ರಾಹ್ಮಣ ಮಹಾಮಂಡಳ ನಿಯಮಿತದ ಕಾರ್ಯಯೋಜನೆಗಳ ವಿವರವುಳ್ಳ ಯೋಜನಾ ಪತ್ರವನ್ನು ಶ್ರೀ ಶಂಕರ ಪ್ರತಿಷ್ಠಾನದ ಅಧ್ಯಕ್ಷ ಕೇಶವ ರಾವ್ ಇವರಿಗೆ ಹಸ್ತಾಂತರಿಸಲಾಯಿತು. ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರು ಹಾಜರಿದ್ದರು.

## ಲ್ಯಾಂಡ್‌ಟ್ರೇಡ್ಸ್ 'ನಕ್ಷತ್ರ' : ಕ್ಲಬ್ ಹೌಸ್ ಉದ್ಘಾಟನೆ



ಮಂಗಳೂರಿನ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಲ್ಯಾಂಡ್‌ಟ್ರೇಡ್ಸ್ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಮಣ್ಣಗುಡ್ಡೆಯಲ್ಲಿ ನಿರ್ಮಿಸಿದ 'ನಕ್ಷತ್ರ' ಬಹುಮಹಡಿ ಕಟ್ಟಡದಲ್ಲಿ ಆರಂಭಿಸಿದ ಅತ್ಯಾಧುನಿಕ ಹವಾನಿಯಂತ್ರಿತ 'ಕ್ಲಬ್ ಹೌಸ್' ಅನ್ನು ಚಿತ್ರನಟ ರೂಪೇಶ್ ಶೆಟ್ಟಿ ಉದ್ಘಾಟಿಸಿದರು. ನಮ್ಮ ಸಮಾಜದವರಾದ ಲ್ಯಾಂಡ್‌ಟ್ರೇಡ್ಸ್ ವ್ಯವಸ್ಥಾಪಕ, ನಿರ್ದೇಶಕ ಶ್ರೀನಾಥ್ ಹೆಬ್ಬಾರ್ ಮತ್ತು ಕಟ್ಟಡದ ನಿವಾಸಿಗಳು ಉಪಸ್ಥಿತರಿದ್ದರು.

'ಕ್ಲಬ್ ಹೌಸ್' ಆಧುನಿಕ ಜಿಮ್ ಸಾಧನಗಳನ್ನು ಹೊಂದಿದ್ದು ಇಲ್ಲಿನ ನಿವಾಸಿಗಳಿಗೆ ಆರೋಗ್ಯಕರ ಜೀವನ ಶೈಲಿಯೊಂದಿಗೆ ಪ್ರಾರಂಭಿಸಲು ಹೊಸ ಹುರುಪನ್ನು ತುಂಬಿದೆ. ಜತೆಗೆ ಯೋಗ ಮತ್ತು ಧ್ಯಾನ, ಟೇಬಲ್ ಟೆನ್ನಿಸ್, ಚೆಸ್ ಮತ್ತು ಕೇರಂ ಕೊಠಡಿ ಇದೆ. ನಿವಾಸಿಗಳು ತಮ್ಮ ಫಿಟ್ನೆಸ್ ಅನ್ನು ಸುಧಾರಿಸಲು ಮತ್ತು ಉತ್ತಮ ಆರೋಗ್ಯವನ್ನು ಆನಂದಿಸಲು ಸಂಪೂರ್ಣವಾಗಿ ಸುಸಜ್ಜಿತವಾಗಿರುವ ಈ ಸುಂದರವಾದ ಹೊಸ ಸೌಲಭ್ಯ ಅದ್ವಿತೀಯ ಕೊಡುಗೆ. 'ನಕ್ಷತ್ರ'ವು ಮಣ್ಣಗುಡ್ಡದ ಗಾಂಧಿನಗರ, 8ನೇ ಅಡ್ಡ ರಸ್ತೆಯಲ್ಲಿರುವ ಲ್ಯಾಂಡ್‌ಟ್ರೇಡ್ಸ್‌ನ ಪ್ರೀಮಿಯಂ ವಸತಿ ಯೋಜನೆ. ಭವ್ಯವಾದ 15 ಅಂತಸ್ತಿನ ಕಟ್ಟಡವು 2 ಬಿ.ಎಚ್.ಕೆ., 3 ಬಿ.ಎಚ್.ಕೆ. ಹಾಗೂ 4 ಬಿ.ಎಚ್.ಕೆ. ಪ್ರಕಾರದ 52 ಫ್ಲ್ಯಾಟ್‌ಗಳನ್ನು ಒಳಗೊಂಡಿದೆ. ಹೆಚ್ಚಿನ ಮಾಹಿತಿಗೆ www.landtrades.in ಗೆ ಭೇಟಿ ನೀಡಬಹುದು.

## ಆರೋಗ್ಯ ತಪಾಸಣಾ ಶಿಬಿರ



ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬ್ರಹ್ಮಾವರ ತಾಲೂಕು ಇದರ ವತಿಯಿಂದ ಡಿಸೆಂಬರ್ 31ಕ್ಕೆ ಸಂಘದ ಕೇಂದ್ರ ಕಛೇರಿಯಲ್ಲಿ "ಆರೋಗ್ಯ ತಪಾಸಣಾ ಶಿಬಿರ" ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಉಡುಪಿ ಜಿಲ್ಲೆಯ ಉದ್ಯಾವರದ ಎಸ್.ಡಿ.ಎಂ. ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ। ಅರುಣ್ ಕುಮಾರ್, ಡಾ। ಸುದರ್ಶನ್ ಭಟ್, ಡಾ। ನಮಿತಾ ಭಟ್, ಡಾ। ರಕ್ಷಿತಾ ಆಗಮಿಸಿದ್ದರು. ರಕ್ತದೊತ್ತಡ, ಮಧುಮೇಹ ಮತ್ತು ಇತರೇ ಪರೀಕ್ಷೆಗಳನ್ನು ನಡೆಸಲಾಯಿತು. ಆರೋಗ್ಯದ ಎಲ್ಲಾ ಸಮಸ್ಯೆಗಳ ಪರಿಹಾರೋಪಾಯಗಳ ಬಗ್ಗೆ ವೈದ್ಯಾಧಿಕಾರಿಗಳು ಉತ್ತಮವಾಗಿ ಮನವರಿಕೆ ಮಾಡಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇದರ ಕಾರ್ಯದರ್ಶಿಯಾದ ಪ್ರಭಾಕರ ಭಂಡಿ ಇವರು ಪಾಲ್ಗೊಂಡರು.

## ಸ್ಥಾನಿಕ ಮಹಾಮಂಡಲ, ಮಂಗಳೂರು ಇವರಿಂದ ಧನಸಹಾಯ

ಸ್ಥಾನಿಕ ಮಹಾಮಂಡಲ, ಮಂಗಳೂರು ಇದರ ವತಿಯಿಂದ (ದಾನಿಗಳ ನೆರವಿನಿಂದ) ಬ್ರಹ್ಮಾವರ ಸಂಘದ ವಿನಂತಿಯ ಮೇರೆಗೆ ನಮ್ಮ ಸಮಾಜದ ಅತೀ ಬಡವರ ಮನೆಯ ಹುಡುಗಿಯ ಮದುವೆಯ ಊಟೋಪಚಾರದ ವೆಚ್ಚದ ಬಗ್ಗೆ ರೂ. 25,000ವನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಮಹಾಮಂಡಲದ ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್, ಕಾರ್ಯದರ್ಶಿ ಮುರಳೀಧರ ಶರ್ಮ, ಕೋಶಾಧಿಕಾರಿ ಉದಯಣ್ಣ ಹಾಗೂ ಬ್ರಹ್ಮಾವರ ಸಂಘದ ಅಧ್ಯಕ್ಷರಾದ ಶಂಭುಶಂಕರ್ ರಾವ್, ಕಾರ್ಯದರ್ಶಿ ಸವಿತಾ ಎರ್ಮಾಳು, ಸದಸ್ಯರಾದ ಕುಮಾರ್ ಸ್ವಾಮಿ, ಭಾಸ್ಕರ ಹೆಬ್ಬಾರ್, ಉಡುಪಿ ಸಂಘದ ನಿರ್ದೇಶಕರಾದ ಕೃಷ್ಣಮೂರ್ತಿ ರಾವ್ ಉಪಸ್ಥಿತರಿದ್ದರು.

ನಮ್ಮ ಈ ಸಾಮಾಜಿಕ ಕೆಲಸಕ್ಕೆ ಸಹಕಾರ ನೀಡಿದ ದಾನಿಗಳಿಗೆ ಧನ್ಯವಾದವನ್ನು ತಿಳಿಸುತ್ತಾ, ಮುಂದೆಯೂ ಇಂತಹ ಕಾರ್ಯಗಳಿಗೆ ಸಮಾಜ ಬಾಂಧವರಿಂದ ಹೆಚ್ಚಿನ ಸಹಕಾರವನ್ನು ಸಂಘವು ನಿರೀಕ್ಷಿಸುತ್ತದೆ ಎಂದು ತಿಳಿಸಿದರು.


## ಸ್ಥಾನಿಕ ಬ್ರಾಹ್ಮಣ ಸಂಘ : ವಾರ್ಷಿಕೋತ್ಸವ



ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ ಕುಂದಾಪುರ ಇದರ ವಾರ್ಷಿಕೋತ್ಸವ ಕಾರ್ಯಕ್ರಮ ಶ್ರೀ ಕೃಷ್ಣ ಸಭಾಭವನ ಮಂಗಳೂರಿನಲ್ಲಿ ಜರಗಿತು. ಜಿಲ್ಲಾ ಆಯುಷ್ ಆಸ್ಪತ್ರೆ ಚಿಕ್ಕಮಂಗಳೂರಿನ ಹಿರಿಯ ವೈದ್ಯಾಧಿಕಾರಿ ಡಾ। ಸತ್ಯನಾರಾಯಣ ರಾವ್ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸತ್ಯನಾರಾಯಣ ಹೆಬ್ಬಾರ್ ಮರೂರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಯಶ್ರೀ ಕೃಷ್ಣಯ್ಯ ಅನಂತಪುರ ಮತ್ತು ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮಂಗಳೂರು ಅಧ್ಯಕ್ಷ ಕೆ. ಮಂಜುನಾಥ ಹೆಬ್ಬಾರ್ ಆಗಮಿಸಿದ್ದರು.

ಜೆ. ಕೃಷ್ಣಗೋಪಾಲ ಹೆಬ್ಬಾರ್, ಲಕ್ಷ್ಮೀನಾರಾಯಣ ರಾವ್, ಜಯಪ್ರಕಾಶ್ ರಾವ್ ಉಳ್ತೂರು, ಪುಷ್ಪಲತಾ ಯು. ಶಾನುಭೋಗ್, ಸುಮರಾಣಿ ಉಪಸ್ಥಿತರಿದ್ದರು. ಸಮಾಜ ಬಾಂಧವರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು. ಸ್ಥಾನಿಕ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಉಮೇಶ್ ಶ್ಯಾನುಭೋಗ್, ಕಿರಿಮಂಜೇಶ್ವರ ಮತ್ತು ವಿದ್ಯಾರ್ಥಿ ವೇತನವನ್ನು ಉದಯಕುಮಾರ್ ಹೆಬ್ಬಾರ್ ಪ್ರಾಯೋಜಕತ್ವದಲ್ಲಿ ವಿತರಿಸಲಾಯಿತು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವ್ಯಕ್ತಿಗಳನ್ನು ಗೌರವಿಸಲಾಯಿತು.

ಜಯಪ್ರಕಾಶ್ ಉಳ್ತೂರು ಸ್ವಾಗತಿಸಿ, ಸುಬ್ರಹ್ಮಣ್ಯ ಹೆಬ್ಬಾರ್ ಮತ್ತು ವಾಣಿ ಸುಭಾಶ್ಚಂದ್ರ ಬಳ್ಕೂರು ನಿರೂಪಿಸಿ, ದಯಾನಂದ ರಾವ್ ಶಂಕರನಾರಾಯಣ ವಂದಿಸಿದರು.



## ಶ್ರೀಮತಿ ನಯನಾ ಎಚ್. ಇವರಿಗೆ ಡಾಕ್ಟರೇಟ್

ನಾರಾಯಣ ಮೆಟ್ರ್ಗ ಮತ್ತು ದಿ। ಶ್ರೀಮತಿ ಯಶೋಧ ದಂಪತಿಯ ಪುತ್ರಿ ಶ್ರೀಮತಿ ನಯನಾ ಎಚ್. ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ "ಕರ್ನಾಟಕದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬಳಕೆದಾರರ ಶಿಕ್ಷಣ ಅಭ್ಯಾಸಗಳು" ಎಂಬ ಪ್ರಬಂಧಕ್ಕಾಗಿ ಡಾಕ್ಟರೇಟ್ ಪಡೆದಿದ್ದಾರೆ. ಇವರು ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಡಾ। ನಯನಾ ಅವರ ಸಾಧನೆಗೆ ಅಭಿನಂದನೆಗಳು.

# ಶ್ರೀಮತಿ ನೀಲಿಮಾ ರವರಿಗೆ ಗೌರವ ಅಭಿನಂದನೆ



ತಾ.25.12.2023ರಂದು ನಮ್ಮ ಸಂಘಕ್ಕೆ ಖಾಸಗಿ ಕಾರ್ಯಕ್ರಮದ ನಿಮಿತ್ತ ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿದ ದಿ| ದಯಾನಂದ ರಾವ್ ರವರ ಮಗಳಾದ ಶ್ರೀಮತಿ ನೀಲಿಮಾ ಮತ್ತು ಅವರ ಮಗ ಇವರಿಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ವತಿಯಿಂದ ಶ್ರೀ ಶಾರದಾ ದೇವಿಯ ಪ್ರಸಾದ ಮತ್ತು ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಕೆ. ಮಂಜುನಾಥ್ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ನಿರ್ದೇಶಕರಾದ ಕೃಷ್ಣಕುಮಾರ್ ಮಟ್ಟು, ಸತೀಶ್ ರಾವ್ ಹಾಗೂ ಗೌರವ ಸಲಹೆಗಾರರಾದ ಸಿ. ಎಸ್. ರಾವ್, ಮಂಗಳೂರು ಸಂಘದ ಕಾರ್ಯದರ್ಶಿ ಕರುಣಾಕರ ಬೆಳ್ಳೆ, ಮೆನೇಜರ್ ಅಜಿತ್ ರಾವ್ ಉಪಸ್ಥಿತರಿದ್ದರು.



# ಪಿ. ಶ್ರೀಕಾಂತ್ ರಾವ್

ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಕೋಶಾಧಿಕಾರಿಗಳಾದ ಪಿ. ಶ್ರೀಕಾಂತ್ ರಾವ್ ಅವರು ಭಾರತೀಯ ರೈಲ್ವೆಯ ದಕ್ಷಿಣ ರೈಲ್ವೆ ವಿಭಾಗಕ್ಕೆ ಸಲಹಾ ಸಮಿತಿ ಸದಸ್ಯರಾಗಿ ಕೇಂದ್ರ ಸರಕಾರದಿಂದ ನಾಮನಿರ್ದೇಶನಗೊಂಡಿದ್ದಾರೆ. ಇವರಿಗೆ ಶ್ರೀ ಶಾರದಾ ಅಭಿನಂದನೆಗಳು.

# ನೂತನ ವಧೂವರರಿಗೆ ಅಭಿನಂದನೆಗಳು



**ಚಿ|| ಸೌ|| ಪ್ರಗತಿ ಭಂಡಿ** BE, MBA **ಹಾಗೂ ಚಿ|| ಪವನ್ ರಾವ್** BE, MS(AE)

ಪೆರ್ಡೂರು ರವೀಂದ್ರ ಭಂಡಿ ಮತ್ತು ಶ್ರೀಮತಿ ವಾಣಿ ಭಂಡಿ ದಂಪತಿಯ ಪುತ್ರಿ ಚಿ| ಸೌ| ಪ್ರಗತಿ ಭಂಡಿ ಅವರ ವಿವಾಹವು ಚಿಟ್ಪಾಡಿ ಅರುಣ್ ಬಿ. ರಾವ್ ಮತ್ತು ಸುಜಾತ ಎ. ರಾವ್ ದಂಪತಿಯ ಪುತ್ರ ಚಿ| ಪವನ್ ರಾವ್ ರವರೊಂದಿಗೆ ತಾ.20.12.2023 ರಂದು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ಗುರು ಹಿರಿಯರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ನೂತನ ವಧೂವರರಿಗೆ ಶುಭ ಕೋರುವ

ಶ್ರೀ ರವೀಂದ್ರ ಭಂಡಿ ಪೆರ್ಡೂರು
ಶ್ರೀಮತಿ ವಾಣಿ ಭಂಡಿ ಪೆರ್ಡೂರು
ಕುಮಾರಿ ಪ್ರಣಮ್ಯ ಭಂಡಿ ಪೆರ್ಡೂರು
ಶ್ರೀ ಅರುಣ್ ಬಿ. ರಾವ್ ಚಿಟ್ಪಾಡಿ
ಶ್ರೀಮತಿ ಸುಜಾತ ಎ. ರಾವ್ ಚಿಟ್ಪಾಡಿ





Welcome to Kanasu The Resort

Escape to Kanasu for an unforgettable nature retreat.
Enjoy rustic pine cottages, warm hospitality, and local culinary delights.
Reconnect with family amidst nature's beauty.

Key Features & Amenities

- 6 Cottages
- 1 Farm House
- AC Rooms
- Swimming Pool
- Free Wifi
- Free Parking
- Free Breakfast
- Goushala
- Dhaba Style Restaurant
- All Kinds of Events

List of Games and Activities:

- Carom, Chess
- Jenga, Dart
- Fussball
- Mini Golf
- Basketball
- Trampoline
- Cricket
- Mini Football
- Badminton

For More Information

+91 90191 26470 www.kanasuresort.com Kukkehalli, Udupi - 576124



SUMIRASA-Full Villa in Udupi for Stay



Relax with the whole family at this peaceful place to stay with all major attraction at a short distance. Enjoy the sea waves at Malpe beach within 5 km drive. Seak blessing at the famous Srikrishna Temple and Anantheshwara Temple which is just 2 k.m.Perfect place for hosting wedding guests with major wedding venues and convention halls near by.



For Booking Contact : +91 98220 28537
You can also visit
https://www.airbnb.co.in/rooms



With Best Compliments From :

BUILDING DREAMS, ENHANCING LIVES.



NAKSHATRA — GANDHINAGAR —
SOLITAIRE — HATHILL, —
HABITAT ONE 54 An Urban Lifestyle — DEREBAIL —
ANANTESSH — CAR STREET, —

Land® Trades
BUILDERS & DEVELOPERS
BUILDING TRUST, DELIVERING VALUE

MANGALURU'S
LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :


SHREE SHARADA – Printed and Published by P. Prabhakara Bhandy on behalf of
Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar